ಅಖಿಲ ಕರ್ನಾಟಕ


# ಶಿಕ್ಷಕ ಸಮಾಚಾರ

ಸಂಪುಟ/Volume : 43
ಸಂಚಿಕೆ/Issue : 7
ಪುಟ/Pages : 12
ಬೆಲೆ/Price : ₹ 10/-

ಏಪ್ರಿಲ್ 2021 ಮಾಸ ಪತ್ರಿಕೆ

Akhila Karnataka Shikshaka Samachar | April 2021 | Monthly



ಕನ್ನಡದ ಅಕ್ಷರಜೀವಿ
ಶತಾಯುಷಿ
ಪ್ರೊ. ಜಿ. ವೆಂಕಟಸುಬ್ಬಯ್ಯ

A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

# ಕಾಯಕದಿಂದ ಅಮರತ್ವ

ಮನುಷ್ಯನಾಗಿ ಜನಿಸಿದವರೆಲ್ಲರೂ ಸಾವನ್ನಪ್ಪದೇ ಅಮರರಾಗುವುದು ಹೇಗೆಂದು ಒಂದಲ್ಲಾ ಒಂದು ದಿನ ಯೋಚಿಸಿಯೇ ಇರುತ್ತಾರೆ. ಮನುಷ್ಯನಾದವನು ಭೌತಿಕವಾಗಿ ಅಮರರಾಗಲೂ ಸಾಧ್ಯವೇ ಇಲ್ಲ, ಹುಟ್ಟಿದವರೆಲ್ಲರೂ ಒಂದಲ್ಲ ಒಂದು ದಿನ ಸಾವನ್ನಪ್ಪಲೇ ಬೇಕು ಎಂದು ಗೊತ್ತಿದ್ದರೂ, ನಾವು ಒಂದಲ್ಲಾ ಒಂದು ದಿನ ಅಮರತ್ವದ ಯೋಚನೆ ಮಾಡಿರುತ್ತೇವೆ. ಆದರೆ ಕೆಲವೊಬ್ಬ ಮಹನೀಯರು ಭೌತಿಕವಾಗಿ ಸಾವನ್ನಪ್ಪಿದ್ದರೂ, ಇಂದಿಗೂ ಅಜರಾಮರರಾಗಿರುವುದನ್ನು ನಾವು ಕೇಳಿದ್ದೇವೆ, ನೋಡಿದ್ದೇವೆ. ನಮ್ಮನ್ನೇ ನಾವು ಉದಾಹರಣೆಯಾಗಿ ತೆಗೆದುಕೊಂಡರೆ ನಮಗೆ ನಮ್ಮ ಮುತ್ತಾತ, ಮುತ್ತಜ್ಜಿಯ ಹಿಂದಿನವರ ಹೆಸರು ಗೊತ್ತಿಲ್ಲದೇ ಇರಬಹುದು. ಆದರೆ ನಮ್ಮ ಮುತ್ತಾತ, ಮುತ್ತಜ್ಜಿಯ ಹಿಂದಿನವರ ಸಮಕಾಲೀನರಾದ ಕೆಲವೊಬ್ಬ ಮಹನೀಯರ ಚರಿತ್ರೆಯೇ ನಮಗೆ ಗೊತ್ತು. ಇದು ಹೇಗೆಂದು ಯೋಚಿಸಿದರೆ ಅವರೆಲ್ಲರೂ ತಮ್ಮ ಕಾಯಕದಿಂದಲೇ ಜನಮಾನಸದಲ್ಲಿ ಸ್ಥಿರವಾಗಿ ಉಳಿದವರು, ಅಮರರಾದವರು. ಹೀಗೆ ಕೆಲವೊಬ್ಬ ಮಹನೀಯರು ತಮ್ಮ ಕಾಯಕದಿಂದ ತಮ್ಮ ಹೆಸರನ್ನು ಅಜರಾಮರವಾಗಿಸಿದರೇ, ಇನ್ನೂ ಕೆಲವೊಬ್ಬರು ತಮ್ಮ ಹೆಸರನ್ನು ಅಮರವಾಗಿಸಲು ಹೆಚ್ಚು ಮಹತ್ವ ನೀಡದೇ, ತಮ್ಮ ಕಾಯಕವನ್ನೇ ಅಮರಗೊಳಿಸಿದ್ದಾರೆ, ಅವರಲ್ಲಿ ಪ್ರಮುಖರೆಂದರೆ ರಾಷ್ಟ್ರೀಯ ಸ್ವಯಂ ಸೇವಕಸಂಘದ ಜನ್ಮದಾತ ಡಾ॥ ಕೇಶವಬಲಿರಾಂ ಹೆಡಗೆವಾರರು. ಇಂದಿಗೂ ಡಾ॥ ಕೇಶವಬಲಿರಾಂ ಹೆಡಗೆವಾರರು ಯಾರೆಂದರೆ ನಮ್ಮಲ್ಲಿ ಕೆಲವೊಬ್ಬರಿಗೇ ಗೊತ್ತಾಗದೇ ಇರಬಹುದು, ಆದರೆ ಆರ್.ಎಸ್.ಎಸ್ ಎಂದರೆ ಎಲ್ಲರಿಗೂ ಏನೆಂದು ಗೊತ್ತು.

ನಾವೆಲ್ಲಾ ಸಣ್ಣ-ಪುಟ್ಟ ಕೆಲಸ ಮಾಡಿದರೂ ಎಲ್ಲಾ ಕಡೆ ನಮ್ಮ ಹೆಸರು ರಾರಾಜಿಸಬೇಕೆಂದು ಬಯಸುತ್ತೇವೆ. ನಾಮ್ ಕೊ ಮಹತ್ವ ದೇನಾ ನಹೀಂ ಚಾಹಿಯೆ, ಕಾಮ್ ಕೊ ಮಹತ್ವ ದೇನಾ ಚಾಹಿಯೆ. ವಹಿ ಹಮೆ ಅಮರ ಬನಾಯೆಗಾ, ಎಂಬ ಸಂದೇಶವನ್ನು ನಾವು ಈ ಮಹನೀಯರಿಂದ ಕಲಿಯಬಹುದು. ಹೆಸರಿಗೆ ಮಹತ್ವ ಕೊಡುವುದನ್ನು ಬಿಟ್ಟು ಕೆಲಸಕ್ಕೆ ಮಹತ್ವ ಕೊಟ್ಟರೆ, ಅದೇ ಕೆಲಸವೇ ನಮ್ಮ ಹೆಸರನ್ನು ಅಮರಗೊಳಿಸುತ್ತದೆ.

**ಪ್ರತಿಯೊಬ್ಬ ಮನುಷ್ಯನೂ ಶ್ರೀರಾಮನಾದರೇ ....**

ಮರ್ಯಾದಾ ಪುರುಷೋತ್ತಮ ಶ್ರೀರಾಮನೂ ತನ್ನ ಜೀವನದ ಶ್ರೇಷ್ಠ ಕಾಯಕಗಳಿಂದಲೇ ಮನುಕುಲಕ್ಕೆ ಮಾದರಿಯಾಗಿರುವುದು. ಅಯೋಧ್ಯೆಯಲ್ಲಿ ಶ್ರೀರಾಮನ ಭವ್ಯ ಮಂದಿರದ ನಿರ್ಮಾಣ ಮಾಡಬೇಕೆಂದು ಬಯಸಿದಾಗ ದೇಶದ ಪ್ರತಿಯೊಬ್ಬರೂ ಭೇಧಭಾವ ಮಾಡದೇ ತನು-ಮನ-ಧನ ಸಹಾಯ ಮಾಡಿದ್ದು ನಮಗೆಲ್ಲಾ ಗೊತ್ತೇ ಇದೆ. ಎಲ್ಲರ ಸಹಕಾರದಿಂದ ಭವ್ಯ ಮಂದಿರ ನಿರ್ಮಾಣ ಆಗುವುದಂತೂ ಖಚಿತ. ಇಂತಹ ಮಹಾನ್ ಪುರುಷರ ಮಂದಿರ ಅವಶ್ಯಕತೆ ಇದೆಯೇ? ಎಂದು ಪ್ರಶ್ನಿಸಿದರೆ, ಹೌದು ಎಂಬುದೇ ಖಡಾಖಂಡಿತ ಉತ್ತರವಾಗುತ್ತದೆ. ಮಂದಿರ ನಿರ್ಮಾಣದ ಉದ್ದೇಶವನ್ನು ಇಟ್ಟುಕೊಂಡು ಸಮಾಜದ ಕೊನೆಯ ವ್ಯಕ್ತಿಯವರೆಗೆ ರಾಮನ ಕುರಿತಾದ ಮಾಹಿತಿಯನ್ನು ಎಲ್ಲಾ ಕಾರ್ಯಕರ್ತರು ತಲುಪಿಸಿದ್ದು ಇಂದಿನ ಸಮಾಜಕ್ಕೆ ಶ್ರೀರಾಮನ ಗುಣಗಳೆಲ್ಲವೂ ಪ್ರಸ್ತುತ ಎಂದು. ನಮ್ಮ ಮುಂದಿನ ಪೀಳಿಗೆಗೂ ಒಂದು ಒಳ್ಳೆಯ ಮಾದರಿಯಲ್ಲವೇ ಮರ್ಯಾದಾ ಪುರುಷೋತ್ತಮ ಶ್ರೀರಾಮ. ನಮ್ಮ ಮುಂದಿನ ಪೀಳಿಗೆಯಲ್ಲಿಯೂ ನಾವು ಶ್ರೀರಾಮನನ್ನು ಬಯಸುವುದಿಲ್ಲವೇ? ಹಿಂದಿನ ಕಾಲದಲ್ಲಾದರೆ ಅಜ್ಜ-ಅಜ್ಜಿಯರು ಪುರಾಣ ಪುಣ್ಯ ಕಥೆಗಳನ್ನು ಚಿಕ್ಕ ಮಕ್ಕಳಿಗೆ ಹೇಳಿ ಅವರ ಜೀವನದಲ್ಲಿ ಶ್ರೇಷ್ಠ ವ್ಯಕ್ತಿಗಳ ಗುಣಗಳು ಬಾಲ್ಯದಿಂದಲೇ ಹಾಸುಹೊಕ್ಕಾಗಿ ಇರುವಂತೆ ಮಾಡುತ್ತಿದ್ದರು. ಆದರೆ ಇಂದು ತಂದೆ-ತಾಯಿಗಳಿಬ್ಬರು ವೃತ್ತಿನಿರತರಾಗಿರುವುದರಿಂದ ಯಾರಿಗೂ ಮಕ್ಕಳಿಗೆ ಕಥೆಗಳನ್ನು ಹೇಳುವಷ್ಟು ಸಮಯ ಇರದೇ ಇರಬಹುದು. ಇಂತಹ ಮಹಾನ್ ವ್ಯಕ್ತಿಗಳ ಮಂದಿರಗಳು, ಭವ್ಯ ಶಿಲ್ಪಗಳು ನಿರ್ಮಾಣವಾದರೆ, ಅವರ ಜನ್ಮಾಷ್ಟಮಿಯನ್ನು ಅರ್ಥಬದ್ಧವಾಗಿ ಆಚರಿಸಿದರೆ ಅವು ಮುಂದಿನ ಪೀಳಿಗೆಗೆ ಜ್ಞಾನಮೃತಗಳಾಗಬಹುದು. ಎಲ್ಲರೂ ಶ್ರೀರಾಮನ ಎಲ್ಲಾ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ, ಪ್ರಪಂಚದಲ್ಲಿರುವವರೆಲ್ಲರೂ ಶ್ರೀರಾಮನಂತಾಗಿ, ಪ್ರಪಂಚವೇ ಒಂದು ಅಯೋಧ್ಯೆಯಾಗಬಹುದಲ್ಲವೇ?

ಎಲ್ಲ ಪ್ರೀತಿಯ ಓದುಗರಿಗೆ ಶ್ರೀರಾಮನವಮಿಯ ಶುಭಾಶಯಗಳು

---------------------------


**ಅಷ್ಟೋತ್ತರ ಶತಾಯುಷಿ ಶಬ್ದಬ್ರಹ್ಮ ಪ್ರೊ. ಜಿ ವೆಂಕಟಸುಬ್ಬಯ್ಯ**

ಕನ್ನಡದ ಶಬ್ದಬ್ರಹ್ಮ, ಸಂಶೋಧಕ, ನುಡಿಗಾರುಡಿಗ, ನಡೆದಾಡುವ ನಿಘಂಟು ಎಂದೇ ಖ್ಯಾತರಾಗಿದ್ದ ಪದ್ಮಶ್ರೀ ಪುರಸ್ಕೃತರಾಗಿದ್ದ ಪ್ರೊ.ಜಿ.ವೆಂಕಟಸುಬ್ಬಯ್ಯನವರು ವಯೋಸಹಜ ಅನಾರೋಗ್ಯದ ಕಾರಣ ದಿ.18.04.21 ರಂದು 108ನೇ ವಯಸ್ಸಿನಲ್ಲಿ ಇಹಲೋಕದ ಬದುಕಿಗೆ ವಿದಾಯ ಹೇಳಿದ್ದರೂ, ಅವರು ಅವರ ಕಾಯಕದಿಂದ ಕನ್ನಡ ಸಾರಸ್ವತ ಲೋಕದಲ್ಲಿ ಎಂದಿಗೂ ಚಿರಂಜೀವಿಯಾಗಿ ಉಳಿದಿದ್ದಾರೆ. ಮಹಾನ್ ಚೇತನಕ್ಕೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಎಲ್ಲಾ ಶಿಕ್ಷಕರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ.

---------------------------

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ದೇಶದಲ್ಲಿರುವ ರಾಜ್ಯಮಟ್ಟದ ಸಂಘಗಳೊಂದಿಗೆ ಸೇರಿ ದೇಶದಾದ್ಯಂತ ಎಲ್ಲಾ ಶಿಕ್ಷಕರಿಗೂ ಸಂಶೋಧನಾ ಲೇಖನ ಸ್ಪರ್ಧೆ ಏರ್ಪಡಿಸಿದ್ದೂ, ಹೆಚ್ಚಿನ ಸಂಖ್ಯೆಯ ಶಿಕ್ಷಕರು ಭಾಗವಹಿಸಿ, ದೇಶ ಮಟ್ಟದಲ್ಲಿ ಕರ್ನಾಟಕದ ಕೀರ್ತಿ ಪತಾಕೆಯನ್ನು ಹಾರಿಸಿ ಬಹುಮಾನ ಪಡೆಯಬೇಕೆಂದು ಕ.ರಾ.ಮಾ.ಶಿ.ಸಂಘದ ಕೋರಿಕೆ. ಈ ಸಂಚಿಕೆಯ ಕೊನೆಯ ಒಳಪುಟದಲ್ಲಿ ಪೂರ್ಣ ಮಾಹಿತಿಯನ್ನು ಪಡೆಯಬಹುದಾಗಿದೆ. ಇನ್ನೂ ಹೆಚ್ಚಿನ ಮಾಹಿತಿಯನ್ನು ಪಡೆಯಲು https://abrsm.in ಗೆ ಭೇಟಿ ನೀಡಿ.

ಸಂಪಾದಕ



ದೇವರು ಮನುಷ್ಯನಿಗೆ ಹೇಳುತ್ತಾನೆ:
ನಾನು ನಿನ್ನನ್ನು ಪ್ರೀತಿಸಬಲ್ಲೆ ;
ಅಂತೆಯೇ ಶಿಕ್ಷಿಸುತ್ತೇನೆ.
ನಿನ್ನನ್ನು ನೋವಿನಿಂದ ಗುಣಪಡಿಸಬಲ್ಲೆ ;
ಅಂತೆಯೆ ನೋಯಿಸುತ್ತೇನೆ.

- ರವೀಂದ್ರನಾಥ ಠಾಕೂರ್

## ಪರಿವಿಡಿ


- ಸಂಘರೂಪಿ ಕೇಶವ 3
- ಕನ್ನಡದ ಅಕ್ಷರಜೀವಿ – ಶತಾಯುಷಿ ಪ್ರೊ. ಜಿ.ವಿ. 4
- ಈ ವರ್ಷದ ಎಸ್. ಎಸ್. ಎಲ್. ಸಿ. ಪರೀಕ್ಷೆ ಕಠಿಣತೆಯಿಂದ ಸುಲಭದ ಕಡೆಗೆ 5
- ನಾವೂ ಹೀಗಾಗಬಹುದೇ? 6
- ಶಿಕ್ಷಣ ಮತ್ತು ಪರಿಸರ 7
- ಯುಗಾದಿ ಹೊಸ ವರ್ಷದ ದಿನದರ್ಶಿಕೆ ಬಿಡುಗಡೆ 8
- ಭಾರತ ಪರಿಚಯ 10
- ಅಖಿಲ ಭಾರತೀಯ ಸಂಶೋಧನಾ ಲೇಖನ ಸ್ಪರ್ಧೆ – 2021 11
- ಚಿತ್ರಸುದ್ದಿ 12

# ಸಂಘರೂಪಿ ಕೇಶವ



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ನಮ್ಮ ನಾಡಿನ ಪರಂಪರೆಯಲ್ಲಿ ಹಲವಾರು ಚಿರಂಜೀವಿಗಳಿದ್ದಾರೆ. ಪ್ರಾತಃಸ್ಮರಣೆಯ ಶ್ಲೋಕವೊಂದರಲ್ಲಿ ನಾವು ಪ್ರಮುಖವಾಗಿ ಸ್ಮರಿಸುವರೆಂದರೆ ವ್ಯಾಸ, ವಾಲ್ಮೀಕಿ, ಬಲಿಚಕ್ರವರ್ತಿ, ಹನುಮಂತ, ವಿಭೀಷಣ ಮುಂತಾದವರು. ಚಿರಂಜೀವಿ ಎಂದರೆ ಸಾವಿಲ್ಲದವರು ಎಂದರ್ಥ. ಆದರೆ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು "ಜಾತಸ್ಯ ಹಿ ಧ್ರುವೋ ಮೃತ್ಯುರ್" ಎನ್ನುತ್ತಾನೆ. ಅಂದರೆ ಹುಟ್ಟಿದವನಿಗೆ ಸಾವು ನಿಶ್ಚಿತ ಎಂದರ್ಥ. ಹಾಗಾದರೆ ಚಿರಂಜೀವಿಯ ಅರ್ಥವೇನಾಯ್ತು?

ಇಲ್ಲಿ 'ಚಿರಂಜೀವಿ' ಎಂದರೆ 'ಜೀವಿ'ಯು ಮಾಡಿದ ಕರ್ಮ ಶಾಶ್ವತ ಎಂದರ್ಥ. ಹೀಗಾಗಿಯೇ ವ್ಯಕ್ತಿಯನ್ನು ಸಮಾಜ ಅವರು ಮಾಡಿದ ಸತ್ಕರ್ಮದ ಫಲವಾಗಿಯೇ ಸದಾ ಸ್ಮರಿಸುವುದು.

ಈ ಅರ್ಥದಲ್ಲಿ ರಾಷ್ಟ್ರೀಯ ಸ್ವಯಂ ಸೇವಕಸಂಘದ ಜನ್ಮದಾತ ಡಾ॥ ಕೇಶವಬಲಿರಾಂ ಹೆಡಗೆವಾರರು 'ಚಿರಂಜೀವಿ'.

1889 ಏಪ್ರಿಲ್ 1 ರಂದು ವಿರೋಧಿ ನಾಮ ಸಂವತ್ಸರದ ಯುಗಾದಿಯಂದು ನಾಗಪುರದ ಬಲಿರಾಂಹೆಡಗೆವಾರ್ ಹಾಗೂ ಶ್ರೀಮತಿ ರೇವತಿಬಾಯಿಯವರ ಮೂರನೇ ಮಗನಾಗಿ ಹುಟ್ಟಿದ ಶಿಶುವೇ ಕೇಶವ.

ತನ್ನ 8ನೇ ವಯಸ್ಸಿನಲ್ಲೇ ಇಂಗ್ಲೆಂಡ್‌ನ ರಾಣಿಯ ವಜ್ರಮಹೋತ್ಸವದ ನೆನಪಿಗಾಗಿ ಶಾಲೆಯಲ್ಲಿ ಕೊಟ್ಟ ಮಿಠಾಯಿಯನ್ನು ತಿನ್ನಲು ನಿರಾಕರಿಸಿ ತನ್ನ ದೇಶಭಕ್ತಿಯನ್ನು ಮೆರೆದ ಅಭಿಜಾತ ದೇಶಭಕ್ತ.

ನಾಗಪುರದ ಸೀತಾಬರ್ಡಿ ಕೋಟೆಯ ಮೇಲೆ ಹಾರುತ್ತಿದ್ದ ಯೂನಿಯನ್‌ಜಾಕ್‌ಅನ್ನು ಇಳಿಸಿ ಭಗವಾಧ್ವಜವನ್ನು ಹಾರಿಸುವ ಪ್ರಯತ್ನ ಮಾಡಿದ ಸಾಹಸಿ.

ನೀಲ್‌ಸಿಟಿ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಶಾಲಾತನಿಖಾಧಿಕಾರಿ ಬಂದಾಗ ಸಹವಿದ್ಯಾರ್ಥಿಗಳೊಂದಿಗೆ 'ವಂದೇಮಾತರಂ' ಘೋಷಿಸಿ ಶಾಲೆಯಿಂದ ಹೊರ ಹಾಕಲ್ಪಟ್ಟ ಏಕಮಾತ್ರ ವಿದ್ಯಾರ್ಥಿ.

1916ರಲ್ಲಿ ವೈದ್ಯಕೀಯ ಪದವಿ ಪಡೆದರೂ ಜನರ ಖಾಯಿಲೆಗೆ ಮದ್ದು ಕೊಡುವ ಬದಲಿಗೆ ದೇಶಕ್ಕೆ ಹತ್ತಿದ ಖಾಯಿಲೆಗೆ ಮದ್ದು ಕೊಡುವ ಚಿಂತನೆ ನಡೆಸಿದ ಚಿಂತಕ.

ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ಕ್ರಾಂತಿಕಾರಿಗಳ ತವರುಮನೆ ಕಲ್ಕತ್ತಾವನ್ನು ಆರಿಸಿಕೊಂಡು ಕ್ರಾಂತಿಯ ದೀಕ್ಷೆ ಪಡೆದು ಆಜನ್ಮ ದೇಶಸೇವೆಯ ಸಂಕಲ್ಪ ಮಾಡಿದ ಸ್ವಾತಂತ್ರ್ಯ ಹೋರಾಟಗಾರ. ವೈದ್ಯಕೀಯ ಪದವಿ ಪಡೆದು ನಾಗಪುರಕ್ಕೆ ಬಂದ ಡಾ॥ ಜಿ ಅನೇಕ ಬಗೆಯ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಕಾಂಗ್ರೆಸ್‌ನ ಅನೇಕ ಚಳುವಳಿಗಳಲ್ಲಿ ತೊಡಗಿಸಿಕೊಂಡು ಸೆರೆವಾಸವನ್ನೂ ಅನುಭವಿಸಿದರು. ಆಗಲೇ ಅವರ ಮನಸ್ಸು ಚಿಂತನೆಯನ್ನು ಮಾಡತೊಡಗಿತು.

ಅವರ ಚಿಂತನೆಯ ಧಾಟಿ ಹರಿದುದು ಈ ರೀತಿ. "ಭಾರತ ವಿಶಾಲವಾದ ಭೂಭಾಗ. ಕೋಟಿ ಕೋಟಿ ಜನಸಂಖ್ಯೆ. ಸಂಪದ್ಭರಿತ ದೇಶ. ಆದರೆ ಹಿಡಿಯಷ್ಟು ಆಂಗ್ಲರು ಬಂದು ಸಾಮ್ರಾಜ್ಯ ಸ್ಥಾಪಿಸಲು ಹೇಗೆ ಸಾಧ್ಯವಾಯಿತು? ಬ್ರಿಟಿಷರಿಂದ ಸ್ವಾತಂತ್ರ್ಯಗಳಿಸಿದರೂ ಮತ್ತೆ ಗುಲಾಮ ದೇಶ ಆಗುವುದಿಲ್ಲವೆಂಬುದಕ್ಕೆ ಗ್ಯಾರಂಟಿ ಏನು? ನಾವು ಶತ್ರುಗಳೆದುರು ಸೋತು ಸೊರಗಿದ್ದು ಅವರ ಕಾರಣದಿಂದಲ್ಲ. ಈ ಮಣ್ಣಿನಮಗ ಹಿಂದು ಆತ್ಮಾಭಿಶೂನ್ಯನಾಗಿ, ತನ್ನನ್ನು ತಾನು ಮರೆತು ಕ್ಷುದ್ರ ಸ್ವಾರ್ಥದಿಂದ ಅಸಂಘಟಿತನಾಗಿ ಪರಸ್ಪರ ಕಚ್ಚಾಟದಲ್ಲಿ ನಿರತನಾದಾಗ ಪರರ ಆಕ್ರಮಣಗಳಿಗೆ ತುತ್ತಾದ. ಮತ್ತೆ ಅವನಲ್ಲಿ ಆತ್ಮ ಜಾಗೃತಿ ಮೂಡಿಸಿ 'ನಾವೆಲ್ಲ ಹಿಂದು, ನಾವೆಲ್ಲ ಒಂದು ಹಾಗೂ ಬಂಧು' ಎಂಬ ಭಾವ ಮೂಡಿಸಿದಾಗ ಎಲ್ಲರೂ ಸಂಘಟಿತರಾಗಿ ಪ್ರಬಲ ಸಂಘಟನೆಯ ಮೂಲಕ ಮತ್ತೊಮ್ಮೆ ಭಾರತಿಯನ್ನು ವಿಶ್ವಮಾತೆಯನ್ನಾಗಿಸಬಹುದು. ಹಾಗಾಗಿ ಈ ದೇಶದ ಮಣ್ಣಿನ ಮಕ್ಕಳಾದ ಹಿಂದುಗಳನ್ನು ಸಂಘಟಿಸುವುದೇ ನಮ್ಮ ಪ್ರಥಮ ಆದ್ಯತೆಯಾಗಬೇಕು. ಹಿಂದು ಸಂಘಟಿತನಾದಾಗ ಮಿಕ್ಕೆಲ್ಲ ಸಮಸ್ಯೆಗಳು ತನ್ನಿಂದ ತಾನೇ ಮಾಯವಾದಾವು ಇದು ಡಾ॥ ಜಿಯವರ ಚಿಂತನೆಯಾಗಿತ್ತು.

ಡಾ॥ ಜಿಯವರ ಚಿಂತನೆಯ ಫಲ 1925ರ ವಿಜಯದಶಮಿಯ ದಿನ 'ರಾಷ್ಟ್ರೀಯ ಸ್ವಯಂಸೇವಕ ಸಂಘ'ದ ಸ್ಥಾಪನೆ ಹಿಂದು ಸಂಘಟನೆಯ ಸರಳ ವಿಧಾನ ನಿತ್ಯಶಾಖೆ, ಶಾಖೆ ಎಂದರೆ ಶಿಶುಗಳು, ಬಾಲಕರು, ತರುಣರು ಮುಂತಾಗಿ ಎಲ್ಲ ಹಿಂದುಗಳು 1 ಗಂಟೆ ಒಂದೆಡೆ ಸೇರಿ ಶಾರೀರಿಕ, ಬೌದ್ಧಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು. ತನ್ಮೂಲಕ ಪರಸ್ಪರ ಬಂಧುತ್ವದ ಜಾಗೃತಿ, ಸಾಮಾಜಿಕ ಸಮರಸತೆ, ಶಿಸ್ತು, ತ್ಯಾಗ, ದೇಶಭಕ್ತಿಯ ಭಾವದ ಉದ್ದೀಪನೆ.

ಹೀಗೆ ಪ್ರಾರಂಭವಾದ ಸಂಘ, ಇಂದು 96 ವರ್ಷಗಳ ನಂತರ ದೇಶವ್ಯಾಪಿಯಾಗಿ ಹರಡಿದೆ. ಸಹಸ್ರಾರು ಶಾಖೆಗಳನ್ನು ಹೊಂದಿದೆ. ಲಕ್ಷಾಂತರ ಶಿಶು, ಬಾಲ, ತರುಣ ಪ್ರೌಢ ಸ್ವಯಂಸೇವಕರು ನಿತ್ಯಸೇರಿ ಪ್ರಾರ್ಥನೆ ಮಾಡುತ್ತಾರೆ. ಸಮಾಜಸೇವೆಯ ದೀಕ್ಷೆ ಪಡೆದು ದೇಶಾದ್ಯಂತ ಲಕ್ಷಾಂತರ ಸೇವಾಚಟುವಟಿಕೆಯನ್ನು ನಡೆಸುತ್ತಿದ್ದಾರೆ.

ಇಂದು ಡಾ॥ ಕೇಶವ ಬಲಿರಾಂ ಹೆಡಗೆವಾರರ ಹೆಸರು ಲಕ್ಷಾಂತರ ಜನರಿಗೆ ತಿಳಿಯದಿರಬಹುದು. ಆದರೆ ಭಾರತದ ಕೋಟಿ ಕೋಟಿ ಜನರಿಗೆ ಆರ್.ಎಸ್.ಎಸ್ ತಿಳಿದಿದೆ. ಅದು ಮಾಡುತ್ತಿರುವ ಕೆಲಸ ತಿಳಿದಿದೆ. ಸಂಘ ದಿನೇ ದಿನ ಬೆಳೆಯುತ್ತಿದೆ. ಹೀಗೆ ಸಂಘರೂಪದಲ್ಲಿ ಡಾ॥ ಜಿ ಅಜರಾಮರರಾಗಿದ್ದಾರೆ, ಚಿರಂಜೀವಿಯಾಗಿದ್ದಾರೆ. ●

# ಕನ್ನಡದ ಅಕ್ಷರಜೀವಿ – ಶತಾಯುಷಿ ಪ್ರೊ. ಜಿ.ವಿ.



**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು


ಇಗೋ, ಇವರೇ ಕನ್ನಡದ ಅಕ್ಷರಜೀವಿ, ಸಾಹಿತ್ಯಜೀವಿ, ನಡೆದಾಡುವ ನಿಘಂಟು, ಶಬ್ದಸಾಗರ, ಭಾಷಾ ಶಾಸ್ತ್ರಜ್ಞ ಎಂಬ ಗೌರವಕ್ಕೆ ಸಂದವರು, ನಾಡಿನಾದ್ಯಂತ ಪರಿಚಿತರಾಗಿವಂತೆ 'ಇಗೋ ಕನ್ನಡದ ಜಿ.ವಿ'. ವಿದ್ಯೆ ಮತ್ತು ವಿನಯದ ಸಾಕಾರಮೂರ್ತಿ. ಕಳೆದ ಆಗಸ್ಟ್ 23 ಕ್ಕೆ 107 ನೇ ವರ್ಷಕ್ಕೆ ಪಾದಾರ್ಪಣೆ ಮಾಡಿ, ಜೀವನೋತ್ಸಾಹವನ್ನು ಸದಾ ತುಂಬಿಕೊಂಡಿದ್ದ, ಸಾರ್ಥಕ ಬದುಕಿನ ಧನ್ಯತೆಯನ್ನು ಹೊಂದಿದ್ದ, ನಾಡಿನ ಸಾರಸ್ವತ ಪ್ರಪಂಚದ ಅತ್ಯಂತ ಹಿರಿಯ ಚೇತನವೆನಿಸಿದ್ದ ಪ್ರೊ. ಗಂಜಾಂ ವೆಂಕಟಸುಬ್ಬಯ್ಯನವರು.

ತಮ್ಮ ಸುದೀರ್ಘ ಬದುಕಿನಲ್ಲಿ ಇವರು ನಿರ್ವಹಿಸಿಕೊಂಡು ಬಂದಿದ್ದ ಕಾರ್ಯಕ್ಷೇತ್ರಗಳು ಒಂದೆರಡಲ್ಲ. ಶಿಕ್ಷಣ, ಸಂಶೋಧನೆ, ಅನುವಾದ, ಪ್ರಬಂಧ, ವಿಮರ್ಶೆ, ಗ್ರಂಥಸಂಪಾದನೆ, ನಿಘಂಟುಗಳ ನಿರ್ಮಾಣ, ಸಾಹಿತ್ಯ ಸಂಸ್ಥೆಗಳ ನಿರ್ವಹಣೆ– ಹೀಗೆ ವೈವಿಧ್ಯಮಯ. ಇವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಎಂಟು ಸಂಪುಟಗಳ ಬೃಹತ್ ನಿಘಂಟು ರಚನೆಯಾದದ್ದು ಇವರ ಮೇರು ಸಾಧನೆ. ಪರಿಷತ್ತಿನ ಅಧ್ಯಕ್ಷರಾದಾಗ ಇವರು ಆವರೆಗಿನ ಅತಿ ಕಿರಿಯ ವಯಸ್ಸಿನ ಅಧ್ಯಕ್ಷರಾಗಿದ್ದರು. 2010 ರಲ್ಲಿ ಸಾಹಿತ್ಯಸಮ್ಮೇಳನದ ಅಧ್ಯಕ್ಷರಾದಾಗ ಅದುವರೆಗಿನ ಅತ್ಯಂತ ಹಿರಿಯ ವಯಸ್ಸಿನ ಸಮ್ಮೇಳನಾಧ್ಯಕ್ಷರೆನಿಸಿದ್ದರು.

ದೇಹ ಹಾಗೂ ಮನಸ್ಸು ಎರಡನ್ನೂ ತುಂಬ ಆರೋಗ್ಯಕರವಾಗಿ ಇಟ್ಟುಕೊಂಡಿದ್ದ ಪ್ರೊ. ಜಿ.ವಿ.ಯವರು ಹಿರಿಯ, ಕಿರಿಯರೆಂಬ ಭೇದವಿಲ್ಲದೆ ಎಲ್ಲರನ್ನೂ ಅತ್ಯಂತ ವಿಶ್ವಾಸದಿಂದ, ಆತ್ಮೀಯತೆಯಿಂದ ಮಾತನಾಡಿಸುತ್ತಿದ್ದ ಸೌಜನ್ಯಮೂರ್ತಿ. ನಾಡಿನಾದ್ಯಂತ ಪ್ರಶಸ್ತಿಗಳ ಸರಮಾಲೆಯನ್ನು ಕಟ್ಟಿಕೊಂಡಿರುವುದರೊಂದಿಗೆ, ನಾಡಿನ, ದೇಶದ ವಿದ್ವಾಂಸರ ವಲಯದಲ್ಲಿ ಪ್ರಮುಖ ಸ್ಥಾನದ ಗೌರವವನ್ನು ಹೊಂದಿರುವುದರೊಂದಿಗೆ, ಅಪಾರ ಸಂಖ್ಯೆಯ ಶಿಷ್ಯವೃಂದದ, ಅಸಂಖ್ಯಾತ ಕನ್ನಡಿಗರ ಅಭಿಮಾನದ ಮಹಾಪೂರದಲ್ಲೇ ಮಿಂದ ಸಂತೃಪ್ತಿಯು ಇವರದಾದರೂ ಅದರ ಹಿಂದೆ ಪರಿಶ್ರಮದ ಬದುಕು ನಡೆಸಿರುವವರೆಂಬುದು ಕೂಡ ಸತ್ಯವೇ.

ಬದುಕಿನುದ್ದಕ್ಕೂ ಇವರು ಪಾಲಿಸಿಕೊಂಡು ಬಂದಿದ್ದ ಆದರ್ಶದ ನಡೆಯೆಂದರೆ ಇದು. "ಬಾಳಿನಲ್ಲಿ ಎಂತಹ ವಿಷಮ ಸನ್ನಿವೇಶವೇ ಮೂಡಿಬಂದರೂ ಉತ್ಸಾಹವನ್ನು ಎಂದೂ ಕಳೆದುಕೊಳ್ಳಬಾರದು. ಪ್ರಯತ್ನಪೂರ್ವಕವಾಗಿ ಅದನ್ನು ವೃದ್ಧಿಸಿಕೊಳ್ಳಬೇಕು, ಸಮಾಧಾನದಿಂದ ಬಾಳುತ್ತಾ ಸಾಧ್ಯವಾದಷ್ಟೂ ಇತರರಿಗೆ ಸಂತೋಷವನ್ನು ಹಂಚಬೇಕು. ಹೆದರಿ ಕುಸಿಯಬಾರದು. ಸೋಲಲು ಒಪ್ಪದ ಮನಸ್ಸು ಗೆಲ್ಲಲು ದುಡಿಯುವ ತಪಸ್ಸು ಇವುಗಳನ್ನು ಸಾಧಿಸು".

ಮಂಡ್ಯ ಜಿಲ್ಲೆಯ ಮುದುಗುಂದೂರು ಜಿ.ವಿ.ಯವರ ಪೂರ್ವಿಕರ ಸ್ಥಳ. ವಿದ್ಯಾವಂತ, ಕರ್ಮಿಷ್ಠ ಬ್ರಾಹ್ಮಣರ ನೆಲೆವೀಡು. ನರಸಿಂಹ ಜೋಯಿಸರು ಜಿ.ವಿ.ಯವರ ತಾತ, ಅಜ್ಜಿ ಲಕ್ಷ್ಮೀದೇವಮ್ಮ. ತಾತನೊಂದಿಗೆ ಕಳೆದ ಬಾಲ್ಯ ಜಿ.ವಿ.ಯವರಿಗೆ ತುಂಬ ಅಮೂಲ್ಯ. ಅದು ಅವರು ಬದುಕಿನ ಮೊದಲ ಪಾಠ ಕಲಿತ ಕಾಲವಾಗಿತ್ತು. ಅದು ಕಷ್ಟವಿದ್ದರೂ ಸಮಾಧಾನದ ಬದುಕೆಂದರೆ ಏನೆಂದು ಕಲಿತ ಕಾಲವಾಗಿತ್ತು. ಅದರಿಂದಲೇ ಅವರಿಗೆ ಆ ದಿನಗಳು ಸ್ಮರಣೀಯ. 'ಸಂತೃಪ್ತಿಯಲ್ಲಿ ಸಂತೋಷವಿದೆ' ಎಂಬ ಪಾಠ ಕಲಿಸಿದ ಜೀವನವಾಗಿತ್ತು ಅದು.



ಜೀವನೋತ್ಸಾಹದ, ಶಿಸ್ತಿನ, ಅಚ್ಚುಕಟ್ಟುತನದ ಸಾಕಾರವೆಂದರೆ ಪ್ರೊ. ಜಿ.ವಿ.ಯವರು. ಸೌಜನ್ಯಕ್ಕೆ ಮತ್ತೊಂದು ಹೆಸರೇ ಅವರು. ಆಯಾ ಸಂದರ್ಭಕ್ಕೆ, ಸಮಾರಂಭಕ್ಕೆ ಅನುಗುಣವಾಗಿ ಗರಿಮುರಿಯದ ಉಡುಪನ್ನು ಧರಿಸಿ, ಸಮಯಕ್ಕೆ ಸರಿಯಾಗಿ ಹಾಜರಾಗುತ್ತಿದ್ದ ಸಮಯಪಾಲಕರು ಅವರು. 'ಕನ್ನಡಕ್ಕೆ ಸೂಟು ತೊಡಿಸಿದವರು' ಎಂದೇ ಪ್ರಜಾವಾಣಿಯ 'ಛೂಬಾಣ' ಅಂಕಣದಲ್ಲಿ ಸಂಪಾದಕ ರಾಮಚಂದ್ರರಾವ್ ಜಿ.ವಿಯವರನ್ನು ಪರಿಚಯಿಸಿದ್ದರು. ಕನ್ನಡ ಸಾರಸ್ವತಲೋಕಕ್ಕೆ ಹಲವು ಅಮೂಲ್ಯ ಕೊಡುಗೆಗಳನ್ನು ನೀಡಿರುವ ನಾಡೋಜ ಜಿ.ವಿ.ಯವರು 'ಪದ್ಮಶ್ರೀ' ಪುರಸ್ಕೃತರು. ಉಳಿದಂತೆ ಕರ್ನಾಟಕ ಸಾಹಿತ್ಯ ಅಕಾಡೆಮಿ, ರಾಜ್ಯೋತ್ಸವ, ಶಂಬಾ, ಸೇಡಿಯಾಪು, ಶಿವರಾಮಕಾರಂತ, ಪತ್ರಿಕಾ ಅಕಾಡೆಮಿ, ಅನಕೃ ನಿರ್ಮಾಣ, ಗೋಕಾಕ್ ಮುಂತಾದ ಹಲವಾರು ಪ್ರಶಸ್ತಿಗಳ ಗೌರವವನ್ನು ಸ್ವೀಕರಿಸಿದವರು.

ಬದುಕು–ಬರಹ, ನಡೆ–ನುಡಿ ಎರಡರಿಂದಲೂ ಶಿಕ್ಷಣ ನೀಡುತ್ತಿದ್ದ ಈ ಹಿರಿಯರಿಂದ ಕಲಿಯಬೇಕಾದ ಪಾಠಗಳೆಷ್ಟು? ಪಟ್ಟಿ ಬೆಳೆಯುತ್ತಲೇ ಇರುತ್ತದೆ. ಸಮಯಪಾಲನೆ, ಪ್ರತಿಯೊಂದರಲ್ಲಿ ಅಚ್ಚುಕಟ್ಟುತನ, ಕ್ರಿಯಾಶೀಲತೆ, ಕಾರ್ಯಶ್ರದ್ಧೆ, ಹಿರಿ–ಕಿರಿಯರೆಂಬ ಭೇದವಿಲ್ಲದೆ ಎಲ್ಲರೊಡನೆ ಸರಳವಾಗಿ, ಮುಕ್ತವಾಗಿ ಬೆಳೆಯುವ ಸ್ನೇಹಪೂರ್ಣ ಸ್ವಭಾವ, ಸದಾ ಹಸನ್ಮುಖಿಯಾಗಿರುವ ಸಮಚಿತ್ತ, ಗುಣಗ್ರಾಹಿಯಾಗಿರುವ ಹೃದಯ ಶ್ರೀಮಂತಿಕೆ, ಸದಾಕಾಲಕ್ಕೂ ತೂಕ ತಪ್ಪದ ಮಾತುಗಾರಿಕೆ, ಕಿರಿಯರನ್ನು ಪ್ರೋತ್ಸಾಹಿಸುವ ಗುರುತನ, ಜ್ಞಾನಸಂಪತ್ತನ್ನು ತಮ್ಮದಾಗಿಸಿಕೊಂಡಿದ್ದರೂ ತೋರಿಸಿಕೊಳ್ಳದ ಸರಳತೆ, ವಿಷಯ ಪರಿಣತಿ, ಆತ್ಮಸಾಕ್ಷಿಗೆ ವಿರುದ್ಧವಾಗಿ ಎಂದಿಗೂ ನಡೆಯದ ನಿರ್ಭಯವಾದ ನಡೆ–ನುಡಿ, ಒಂದೇ? ಎರಡೇ? ಎಲ್ಲಕ್ಕಿಂತ ಹೆಚ್ಚಾಗಿ ತಮ್ಮಿಂದ ಮಾರ್ಗದರ್ಶನವನ್ನು ಬಯಸಲು ಬರುವ, ಭಾಷೆ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಂದೇಹಗಳನ್ನು ಹೊತ್ತು ತರುವವರಿಗೆ ಸಹನೆಯಿಂದ ಉತ್ತರಿಸುವ ಹಿರಿತನ.

ನಾಡಿನ ಸಾರಸ್ವತಲೋಕದ ಈ ಹಿರಿಯ ಚೇತನಕ್ಕೆ ಇದೊಂದು ಸಮಸ್ತ ಶಿಕ್ಷಕ ಬಂಧುಗಳ ಪರವಾಗಿ ನುಡಿ ನಮನ. ●

# ಈ ವರ್ಷದ ಎಸ್. ಎಸ್. ಎಲ್. ಸಿ. ಪರೀಕ್ಷೆ ಕಠಿಣತೆಯಿಂದ ಸುಲಭದ ಕಡೆಗೆ

**ಚಿದಾನಂದ್ ಆ ಕೇಸ್ಕರ ಪಾಟೀಲ್**
ರಾಜ್ಯ ಪ್ರಧಾನಕಾರ್ಯದರ್ಶಿ
ಕ.ರಾ.ಮಾ.ಶಿ.ಸಂ.



ವಿದ್ಯಾರ್ಥಿಗಳ ಜೀವನದಲ್ಲಿ ಮಹತ್ವದ ಘಟ್ಟ ಎನಿಸಿಕೊಂಡಿರುವ ಹತ್ತನೇ ತರಗತಿಯ ಪರೀಕ್ಷೆ ಈ ವರ್ಷ ಅನೇಕ ವಿಶೇಷತೆಗಳಿಂದ ಕೂಡಿದೆ. ಶಾಲೆ ಪ್ರಾರಂಭ ಜೂನ್‌ನಲ್ಲಿ ಆಗಬೇಕಿದ್ದುದು ಆದರೆ ಜನವರಿಯಲ್ಲಿ ಪ್ರಾರಂಭವಾಯಿತು. ಹಾಗೆ ಏಪ್ರಿಲ್-ಮೇ ಪರೀಕ್ಷೆಗಳ ಕಾಲವಾಗಿದ್ದವು. ಆದರೆ ಈ ವರ್ಷ ಜೂನ್ ಕೊನೆಯಲ್ಲಿ ಪರೀಕ್ಷೆ ನಿರ್ಧಾರವಾಗಿದೆ.

ಕರ್ನಾಟಕ ಪಠ್ಯ ಪುಸ್ತಕ ಮಂಡಳಿಯ ಸಲಹೆಯಂತೆ ಇಲಾಖೆ 30% ರಷ್ಟು ಪಠ್ಯವನ್ನು ಕಡಿತ ಮಾಡಿದೆ. ಅದಕ್ಕಾಗಿ ಕೆಲವು ಪಾಠಗಳನ್ನು ತೆಗೆದು ಹಾಕಿದರೆ, ಮತ್ತೆ ಕೆಲವು ಪಾಠಗಳಲ್ಲಿಯ ಕೆಲವು ಅಂಶಗಳನ್ನು(ಭಾಗಗಳನ್ನು) ಕೈ ಬಿಟ್ಟಿದೆ. ಶಿಕ್ಷಕರ ಅಂದಾಜಿನ ಪ್ರಕಾರ ಗಣಿತದ ಅನೇಕ ಕಠಿಣವಾದ ಪಾಠಗಳನ್ನು ಕೈ ಬಿಟ್ಟಿರುವುದು ಮಕ್ಕಳಿಗೆ ಅನುಕೂಲವಾಗಿದೆ. ಇದರಿಂದಾಗಿ ಮಕ್ಕಳ ಮತ್ತು ಶಿಕ್ಷಕರ ಮೇಲಿದ್ದ ಪಠ್ಯದ ಒತ್ತಡ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ.

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಕೋವಿಡ್ ಸಂಕಷ್ಟ ಕಾಲದಲ್ಲಿ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಪ್ರಶ್ನೆ ಪತ್ರಿಕೆಯ ವಿನ್ಯಾಸದಲ್ಲಿ ಬದಲಾವಣೆ ತರುವುದಾಗಿ ಸುತ್ತೋಲೆ ಹೊರಡಿಸಿ ಪ್ರಶ್ನೆ ಪತ್ರಿಕೆಯ ಕಠಿಣತೆಯ ಮಟ್ಟವನ್ನು ಕಡಿಮೆ ಮಾಡಿ, ಅತಿಸುಲಭ ಪ್ರಶ್ನೆಗಳ ಸಂಖ್ಯೆಯನ್ನು ಶೇಕಡಾ 30ರಿಂದ 40ಕ್ಕೆ ಹೆಚ್ಚಿಸಿದೆ. ಆದರೆ ಪ್ರಶ್ನೆಯ ವಿಧಗಳಲ್ಲಿ ಬದಲಾವಣೆ ಮಾಡಿಲ್ಲ ಎನ್ನುವುದು ವಿಶೇಷ. ಹೀಗಾಗಿ ಈ ವರ್ಷದ ಪ್ರಶ್ನೆ ಪತ್ರಿಕೆಯಲ್ಲಿ ಮಕ್ಕಳು ಸುಲಭವಾಗಿ ಬರೆಯಬಹುದಾದ ಪ್ರಶ್ನೆಗಳು ಹೆಚ್ಚಿರುತ್ತವೆ. ಇದರಿಂದಾಗಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೂ ಅನುಕೂಲವಾಗುವುದು. ಅಂದರೆ ಸುಲಭದ ಪ್ರಶ್ನೆಗಳು, 1,2,3,4 ಅಂಕಗಳ ಪ್ರಶ್ನೆಗಳಲ್ಲಿ ಹೆಚ್ಚಾಗಿ ಇರುತ್ತವೆ. ಇದರಿಂದಾಗಿ ಸರಾಸರಿ ಉತ್ತೀರ್ಣರಾಗಲು ವಿದ್ಯಾರ್ಥಿಗಳಿಗೆ ಸಹಾಯಕವಾಗಿದೆ.

ವಿದ್ಯಾರ್ಥಿಗಳ ಅನುಕೂಲತೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು www.sslc.karnatakagov.in ವೆಬ್‌ಸೈಟ್‌ನಲ್ಲಿ ಮಂಡಳಿಯು, ಎಲ್ಲ ವಿಷಯಗಳಲ್ಲಿ ಮಾದರಿಯ ಪ್ರಶ್ನೆ ಪತ್ರಿಕೆಗಳನ್ನು, ಪಠ್ಯದ ಕಡಿತ ಮತ್ತು ಸುಲಭತೆಯ ಮಟ್ಟ ಇವೆರಡನ್ನು ಗಮನದಲ್ಲಿ ಇಟ್ಟುಕೊಂಡು ಪ್ರಶ್ನೆಪತ್ರಿಕೆಗಳನ್ನು ಬಿಟ್ಟಿದೆ. ಇದಲ್ಲದೆ ಮೇ ಎರಡನೇ ವಾರದಲ್ಲಿ ಪೂರ್ವ ಸಿದ್ಧತಾ




ಪರೀಕ್ಷೆಯನ್ನು ಕರ್ನಾಟಕ ಎಸ್.ಎಸ್.ಎಲ್.ಸಿ ಪರೀಕ್ಷಾ ಮಂಡಳಿಯು ನಡೆಸಲಿದೆ. ಅಲ್ಲಿಯು ಮಕ್ಕಳು ಪ್ರಶ್ನೆ ಪತ್ರಿಕೆಯ ಬಗ್ಗೆ ಇರುವ ಆಂತಕವನ್ನು ದೂರ ಮಾಡಿಕೊಳ್ಳಬಹುದಾಗಿದೆ.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷ ಸಂಘ (ರಿ) ವು ಹೋದ ವರ್ಷದಿಂದ ಜಾರಿಗೆ ತಂದಿರುವ "ಎಸ್.ಎಸ್.ಎಲ್.ಸಿ ಮಕ್ಕಳಿಗಾಗಿ ಫೋನ್ ಇನ್ ಕಾರ್ಯಕ್ರಮ" ವನ್ನು ಈ ವರ್ಷ ಮೇ ತಿಂಗಳಲ್ಲಿ ಪ್ರಾರಂಭಿಸುತ್ತದೆ. ಮಕ್ಕಳು ಮತ್ತು ಪೋಷಕರು ತಮಗಿರುವ ಪರೀಕ್ಷಾ ಆತಂಕ ಮತ್ತು ಪ್ರಶ್ನೆಗಳ ಬಗ್ಗೆ ಇರುವ ಗೊಂದಲಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ. ಹೋದ ವರ್ಷ ಒಟ್ಟು ಎರಡು ತಿಂಗಳ ಅವಧಿಯಲ್ಲಿ ರಾಜ್ಯದಲ್ಲಿ 2 ಲಕ್ಷ 80 ಸಾವಿರ ಫೋನ್ ಕರೆಗಳ ಪ್ರಶ್ನೆಗಳಿಗೆ 818 ಸಂಪನ್ಮೂಲ ವ್ಯಕ್ತಿಗಳು ಉತ್ತರಿಸಿದ್ದಾರೆ. ಈ ವರ್ಷವು ಮೇ ತಿಂಗಳಲ್ಲಿ ಈ ಕಾರ್ಯಕ್ರಮ ಪ್ರಾರಂಭವಾಗುವುದು. ವಿವರವನ್ನು ಪ್ರತಿ ಜಿಲ್ಲೆಯಲ್ಲಿರುವ ಜಿಲ್ಲಾ ಘಟಕಗಳು ಶಾಲೆಗಳಿಗೆ ಮಾಹಿತಿಯನ್ನು ತಲುಪಿಸುತ್ತವೆ.

ಎಲ್ಲರ ಪ್ರಯತ್ನ ಮತ್ತು ವಿದ್ಯಾರ್ಥಿಗಳ ಶ್ರಮದಿಂದ ಮುಂಬರುವ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಮಕ್ಕಳು ಸುಲಭವಾಗಿ ಎದುರಿಸುವುದರಲ್ಲಿ ಸಂದೇಹವಿಲ್ಲ.

●

**ಯಾರು ನೇರ ನಡೆಯುಳ್ಳವನಾಗಿ ಸದಾ ಲೋಕಕ್ಕೆ ಪ್ರಿಯವಾಗುವಂತೆ ಬಾಳುತ್ತಾನೋ, ಯಾವಾಗಲೂ ನಿಜವನ್ನೇ ನುಡಿಯುತ್ತಾ ವಿವೇಕದಿಂದಿರುತ್ತಾನೋ, ಮನಸ್ಸು, ಮಾತು, ಕಾರ್ಯಗಳಲ್ಲಿ ಸತ್ಯನಿಷ್ಠನಾಗಿರುತ್ತಾನೋ ಅವನೇ ಲೋಕದಲ್ಲಿ ಧನ್ಯ.**

**-ಸಮರ್ಥ ರಾಮದಾಸ**

**ಶಿಕ್ಷಕ ಸ್ತಂಭ**

# ನಾವೂ ಹೀಗಾಗಬಹುದೇ?





**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**


"ಸುಂದರ ಯುವತಿಯೊಬ್ಬಳು ನನಗೆ ಚುಂಬನ ಕೊಟ್ಟಂತೆ ನೆನ್ನೆ ರಾತ್ರಿ ಕನಸು ಕಂಡೆ. ಈಗ ಏನು ಮಾಡಲಿ?"

"ಬೆಳಿಗ್ಗೆ ಎದ್ದು ಬಾಯಿಬಡಿದುಕೊಳ್ಳಿ"

ಎಲ್ಲರಲ್ಲೂ ನಗೆಯ ಬಾಂಬನ್ನೇ ಸಿಡಿಸುವ ಈ ಪ್ರಶ್ನೋತ್ತರ ನಮ್ಮ ಜನಪ್ರಿಯ ವಾರಪತ್ರಿಕೆ 'ಸುಧಾ' ದಲ್ಲಿ ಹಲವು ದಶಕಗಳ ಹಿಂದೆ ಪ್ರಕಟವಾದದ್ದು. ಈಗಲೂ ಓದಿದ ಕೂಡಲೇ ನಮ್ಮಲ್ಲಿ ನಗೆ ಚಿಮ್ಮಿಸುತ್ತದೆ. ಓದುಗರೊಬ್ಬರ ಪ್ರಶ್ನೆಗೆ ಇಂತಹ ಅದ್ಭುತ ಹಾಸ್ಯಪ್ರಜ್ಞೆಯೊಂದಿಗೆ ಉತ್ತರಿಸಿದ್ದು ಕನ್ನಡ ಸಾಹಿತ್ಯದ ಬರ್ನಾರ್ಡ್‌ಷಾ, ಚಾರ್ಲಿಚಾಪ್ಲಿನ್, ಹಾಸ್ಯಬ್ರಹ್ಮ ಎಂಬೆಲ್ಲ ಹೆಸರುಗಳಿಂದ ಜನಮೆಚ್ಚಿಕೆ ಗಳಿಸಿದ್ದ ರಾಯಸಂ ಭೀಮಸೇನರಾವ್ ಅರ್ಥಾತ್ 'ಬೀಚಿ' ಎಂಬ ಪುಟ್ಟ ನಾಮಧೇಯದೊಂದಿಗೆ ಹಾಸ್ಯರಸವನ್ನು ತಮ್ಮ ವಿಶಿಷ್ಟ ಶೈಲಿಯ ಲೇಖನಗಳ ಮೂಲಕ ಉಣಬಡಿಸಿದ ಸಾಹಿತಿ.



'ಉತ್ತರಭೂಪ' ಎಂಬ ಅಂಕಣದಿಂದ 'ಸುಧಾ' ವಾರಪತ್ರಿಕೆಯ ಮೂಲಕ ಗುಣಮಟ್ಟದ ಹಾಸ್ಯವನ್ನು ಧಾರಾಳವಾಗಿ ಹಂಚಿದವರು. ಬದುಕಿಗೆ ಬೇಕಾದ 'ನಗು' ಎಂಬ ಅಮೃತವನ್ನು ನೀಡಿದವರು.

1913ರ ಇದೇ ಏಪ್ರಿಲ್ 23ರಂದು ಜನಿಸಿದ 'ಬೀಚಿ'ಯವರು ತಮ್ಮ 67 ವರ್ಷಗಳ ಜೀವಿತಾವಧಿಯಲ್ಲಿ (ನಿಧನ 1980–ಡಿ,7) ರಚಿಸಿದ್ದು 65ಕ್ಕೂ ಹೆಚ್ಚು ಕೃತಿಗಳು. ಬದುಕಿನ ಕಡೆಯ ಕ್ಷಣದವರೆಗೂ ಬರೆಯುತ್ತಲೇ ಇದ್ದ ಇವರು ನಾಟಕ, ಕಥೆ, ಕಾದಂಬರಿ, ಲೇಖನ ಎಂದು ಹಲವು ಪ್ರಕಾರಗಳ ಮೂಲಕ ಹಾಸ್ಯದ ಹೊನಲನ್ನೇ ಹರಿಸಿದವರು. ನವರಸಗಳಲ್ಲಿ ಒಂದಾದ ಹಾಸ್ಯರಸವನ್ನು ಅದರಲ್ಲಿಯೂ ಆರೋಗ್ಯಕರವಾದ ಹಾಸ್ಯದ ಅನುಭವವನ್ನು ನೀಡುವುದು ಸುಲಭವಲ್ಲ. ಎಲ್ಲರಿಗೂ ಅದು ಸಾಧ್ಯವೂ ಅಲ್ಲ. ಹಾಸ್ಯಪ್ರಜ್ಞೆ, ಸಮಯಸ್ಫೂರ್ತಿ, ಸನ್ನಿವೇಶ, ಸಂದರ್ಭಗಳನ್ನು ತಿಳಿಯುವ, ತಿಳಿದು ಸ್ಪಂದಿಸುವ ಔಚಿತ್ಯಪ್ರಜ್ಞೆ ಎಲ್ಲರಿಗೂ ಇರುವುದಿಲ್ಲ. ಆದರೆ, 'ಬೀಚಿ' ಈ ಎಲ್ಲ ಗುಣಗಳನ್ನೂ ಹೊಂದಿದ್ದ ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಪ್ರತಿಭೆ. ತಮ್ಮ ಅಮೂಲ್ಯ ಕೊಡುಗೆಗಳನ್ನು ನೀಡಿದ ಪ್ರತಿಭೆ. ಹಾಸ್ಯ ಸಾಹಿತಿಗಳೆನಿಸಿಕೊಂಡು ಇಂದು ಗುರುತಿಸಿಕೊಂಡಿರುವ ಹಲವಾರು ಹಿರಿಯ ಸಾಹಿತಿಗಳಿಗೆ ಒಂದು 'ರೋಲ್ ಮಾಡೆಲ್' ಆಗಿ ಪ್ರೇರಕ ಶಕ್ತಿಯಾದವರು.

**ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ।**
**ನಗುವ ಕೇಳುತ ನಗುವುದತಿಶಯದ ಧರ್ಮ॥**
**ನಗುವ ನಗಿಸುವ ನಗಿಸಿ ನಗುತ ಬಾಳುವ ವರವ।**
**ಮಿಗೆ ನೀನು ಬೇಡಿಕೊಳೊ– ಮಂಕುತಿಮ್ಮ॥** ಎಂದಿದ್ದಾರೆ

ಕನ್ನಡ ಸಾಹಿತ್ಯದ ದಾರ್ಶನಿಕ ಕವಿ ಡಿ.ವಿ.ಜಿಯವರು.

ಇಂತಹ ಅದ್ಭುತವಾದ ಶಕ್ತಿಯನ್ನು ಪಡೆದುಕೊಂಡಿದ್ದವರು 'ಬೀಚಿ'. ಅವರು ಭೌತಿಕವಾಗಿ ಮರೆಯಾದರಷ್ಟೇ. ಆದರೆ ಅವರು ನೀಡಿದ ಹಾಸ್ಯದ ಕೊಡುಗೆ ಇಂದಿಗೂ ಶಾಶ್ವತವಾಗಿ ಉಳಿದಿದೆ. ಇವರು ಚಿತ್ರಿಸಿದ ಅಲ್ಲ, ಸೃಷ್ಟಿಸಿದ ಪಾತ್ರ 'ತಿಂಮ' ನು ಹಂಚುವ ಹಾಸ್ಯದ ಒಂದೊಂದೂ ತುಣುಕು ಸದಾ ಹಸಿರಾಗಿವಂತಹುದು. 'ತಿಂಮ' ಊಟ ಮಾಡಿ ಶಾಲೆಗೆ ಹೊರಡಲು ಯೂನಿಫಾರಂ ಧರಿಸಿ ಬೆಲ್ಟ್‌ಗಾಗಿ ಹುಡುಕಾಡುತ್ತಾನೆ. ಸಿಕ್ಕಿದಿದ್ದಾಗ ಇನ್ನು ತಡವಾಗುತ್ತದೆಂದು ಅಮ್ಮನಿಗೆ ಹೇಳುತ್ತಾನೆ. "ಅಮ್ಮಾ, ಬೆಲ್ಟ್ ಸಿಕ್ಕಿಲ್ಲ, ನಿಕ್ಕರ್ ನಿಲ್ತಿಲ್ಲ, ಇನ್ನೊಮ್ಮೆ ಊಟ ಮಾಡಿಬಿಡ್ತೀನಿ, ಬಡಿಸು", ಇದು ಅವರ ಹಾಸ್ಯಬರಹದ 'ಸ್ಯಾಂಪಲ್'. 'ಥೂ,ಕತ್ತೆ', ಎಂದು ತಿಂಮನನ್ನು ಬೈಯುತ್ತಿರುವ ಅವನ ತಂದೆ, ಕಿಟಕಿಯಾಚೆ ನಿಂತು 'ಅಯ್ಯೋ, ನನ್ನನ್ನು ತಿಂಮನಿಗೆ ಹೋಲಿಸುತ್ತಿದ್ದಾರಲ್ಲ' ಎಂದು ಎರಡೂ ಕಣ್ಣುಗಳಿಂದ ಧಾರಾಕಾರ ನೀರು ಸುರಿಸುತ್ತ ನಿಂತಿರುವ ಕತ್ತೆಯ ಚಿತ್ರ. ದಿನನಿತ್ಯದ ಸಣ್ಣ ಪುಟ್ಟ ಸಂಗತಿಗಳಲ್ಲಿಯೂ ಹಾಸ್ಯದ ಲೇಪನವನ್ನು ಹಚ್ಚಿ ರಸಾಯನ ನೀಡಿರುವ ಇಂತಹ ಉದಾಹರಣೆಗಳಿಗೆ ಲೆಕ್ಕವಿಲ್ಲ. ಆದರೆ ಹಾಗೆಂದು ಕೇವಲ ಲಘು ಹಾಸ್ಯವನ್ನು ನೀಡುವುದಷ್ಟೇ ಇವರ ಉದ್ದೇಶವಲ್ಲ. ಹಾಸ್ಯದ ಮೂಲಕ ಸಮಾಜದ ಅಂಕು–ಡೊಂಕುಗಳನ್ನು, ರಾಜಕಾರಣಿಗಳ ಕಪಟವನ್ನು, ಜನರ ಹುಳುಕು, ದಬ್ಬಾಳಿಕೆ–ಶೋಷಣೆಯ ಮನೋಭಾವವನ್ನು ಎತ್ತಿತೋರಿ ಪ್ರತಿಭಟಿಸುವುದನ್ನೂ ಕಾಣುತ್ತೇವೆ. 'ತಿಂಮ' ಜನಸಾಮಾನ್ಯರ ಪ್ರತಿನಿಧಿಯಾಗಿ ಇದೆಲ್ಲವನ್ನೂ ಮಾಡುತ್ತಾನೆ. ಇದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೆಂಬ ಜಾಗೃತಿಯನ್ನು ಮೂಡಿಸುತ್ತಾನೆ.

ಹಾಗಾದರೆ ಇಷ್ಟೆಲ್ಲ ಹಾಸ್ಯವನ್ನು ನೀಡಿದ 'ಬೀಚಿ'ಯವರ ಬದುಕು ಸುಖದ ಸುಪ್ಪತ್ತಿಗೆಯಾಗಿತ್ತೇ? ಖಂಡಿತ ಇಲ್ಲ. ಹುಟ್ಟಿದಾಗಲೇ ತಂದೆಯನ್ನು ಕಳೆದುಕೊಂಡಿದ್ದರಿಂದ ಅಪಶಕುನದ ಮಗುವೆಂದು ಹೆಸರಿಟ್ಟು ಮನೆಯಿಂದ ಹೊರಕ್ಕೆ ಹಾಕಿಸಿಕೊಂಡ ಮಗು, 8ನೇ ವಯಸ್ಸಿಗೇ ತಾಯಿಯನ್ನು

**ಪುಟ 9 ಕ್ಕೆ ➤**

**ಏನು ಬಂದಿರಿ, ಹದುಳಿದ್ದಿರೆ ಎಂದಡೆ ನಿಮ್ಮೈಸಿರಿ ಹಾರಿಹೋಹುದೆ? – ಬಸವಣ್ಣ**

# ಶಿಕ್ಷಣ ಮತ್ತು ಪರಿಸರ

ಲಕ್ಷ್ಮೀಸಿಂಗ್ ಬಿ.
ಶೈಕ್ಷಣಿಕ ಸಮಾಲೋಚಕರು
ಲೈಫ್ ಕೋಚ್
ಲಕ್ಷ್ಮೀ ಕೋಚಿಂಗ್ ಸೆಂಟರ್



ನಮ್ಮ ಸುತ್ತಮುತ್ತ ಇರುವ ಬೆಟ್ಟಗುಡ್ಡಗಳು, ನದಿಸಾಗರಗಳು, ಅರಣ್ಯ, ಆಕಾಶ, ಭೂಮಿ, ಗಾಳಿ, ಮಣ್ಣು ಮುಂತಾದವುಗಳೆಲ್ಲವು ಸೇರಿ ಪರಿಸರವೆನಿಸಿದೆ, ಪರಿಸರ ಮಾನವನ ಒಂದು ಅವಿಭಾಜ್ಯ ಅಂಗ. ಇದರಲ್ಲಿ ಯಾವುದೇ ಒಂದಕ್ಕೆ ಧಕ್ಕೆಯಾದರೂ ಇಬ್ಬರಿಗೂ ಅದರ ಪರಿಣಾಮ ಸಮಾನವಾಗಿರುತ್ತದೆ.

ಮಾನವ ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಯ ಮೇಲೆ ನಿರಂತರವಾಗಿ ದೌರ್ಜನ್ಯ ಎಸಗುತ್ತಲೆ ಇದ್ದಾನೆ. ಅವನಿಗೇ ಅರಿವಿಲ್ಲದಂತೆ ಪರಿಸರ ನಾಶಮಾಡಿ ತಾನೂ ಕೂಡ ವಿನಾಶದತ್ತ ನುಗ್ಗುತ್ತಿದ್ದಾನೆ. ಪ್ರಕೃತಿಯ ವಿಕೋಪದಿಂದ ಅತಿವೃಷ್ಟಿ–ಅನಾವೃಷ್ಟಿ, ಪ್ರವಾಹ, ಸುನಾಮಿ, ಭೂಕಂಪ ಮೊದಲಾದ ಅನಾಹುತಗಳು ನಡೆದು ಪ್ರಪಂಚ ತನ್ನ ಅಂತಿಮವನ್ನು ಭೀಕರವಾಗಿ ಕಾಣಬೇಕಾಗುತ್ತದೆ. ಇದನ್ನು ತಡೆಯುವ ಮತ್ತು ಪರಿಸರವನ್ನು ಪ್ರಕೋಪಗಳಿಂದ ಉಳಿಸುವ ಏಕೈಕ ಮತ್ತು ಪ್ರಭಾವಶಾಲಿ ಮಾಧ್ಯಮವೆಂದರೆ ಶಿಕ್ಷಣ ಮಾಧ್ಯಮ. ಇಂದಿನ ಮಕ್ಕಳು ಮತ್ತು ಯುವ ಜನಾಂಗದ ಮೇಲೆ ಬಹಳವಾಗಿ ಪ್ರಭಾವ ಬೀರುವ ಸಾಮರ್ಥ್ಯವಿರುವುದು ಶಿಕ್ಷಕರಿಗೆ ಮಾತ್ರ, ಶಿಕ್ಷಕರು ಇದನ್ನು ಬಹಳ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು.

ನಮ್ಮ ಸರ್ಕಾರ ಮತ್ತು ಶಿಕ್ಷಣ ತಜ್ಞರು ಇದರ ಬಗ್ಗೆ ಕೇವಲ ಬಾಯಿ ಸೇವೆ ಮಾಡದೆ, ಕಾರ್ಯರೂಪವಾಗಿ ಬದಲಾಯಿಸುವುದರತ್ತ ಗಮನಹರಿಸಬೇಕು. ವಿಜ್ಞಾನ ಮುಂದುವರೆದಂತೆ ಪರಿಸರ ಕೂಡ ತನ್ನ ಸ್ವತ್ತನ್ನು ಕಳೆದುಕೊಳ್ಳಲಾರಂಭಿಸಿದೆ ಎಂದರೆ ತಪ್ಪೇನಿಲ್ಲ. ಹೊಸ ತಂತ್ರಜ್ಞಾನ ಶಿಕ್ಷಣಕ್ಕೆ ಪೂರಕವಾಗಬೇಕು, ತಂತ್ರಜ್ಞಾನವೇ ಶಿಕ್ಷಣ ಆಗಬಾರದು.

ವಿಜ್ಞಾನ, ತಂತ್ರಜ್ಞಾನ ಎಷ್ಟು ಮುಖವೋ ಅಷ್ಟೇ ಅತ್ಯವಶ್ಯಕ ಪರಿಸರದ ಉಳಿವು ಎನ್ನುವ ಗಂಭೀರತೆಯನ್ನು ಯುವ ಜನಾಂಗದಲ್ಲಿ ಬಿತ್ತಲೇಬೇಕು, ವಿಜ್ಞಾನ ಮತ್ತು ಆಧುನಿಕ ತಂತ್ರಜ್ಞಾನದಿಂದ ಪರಿಸರ ಹೇಗೆ ಕಲುಷಿತಗೊಳ್ಳುತ್ತದೆ. ತಂತ್ರಜ್ಞಾನವನ್ನು ಬಳಸಿಕೊಳ್ಳುವುದರ ಜೊತೆಗೆ ಮಾನವ ಸಂಪನ್ಮೂಲಗಳನ್ನು ಉಳಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಶಿಕ್ಷಕರ ಮಕ್ಕಳಲ್ಲಿ ಮತ್ತು ಯುವ ಜನಾಂಗದಲ್ಲಿ ಅರಿವು ಮೂಡಿಸಬೇಕು. ಇಂದು ಇಂದಿನ ಶಿಕ್ಷಕರ ಮತ್ತು ಶಿಕ್ಷಣ ಮಾಧ್ಯಮದ ಮುಖ್ಯವಾದ ಗುರುತರ ಜವಾಬ್ದಾರಿಯಾಗಿದೆ.

ಪ್ರಕೃತಿ ಸಂಪನ್ಮೂಲಗಳ ಮಹತ್ವದ ಬಗ್ಗೆ ಶಿಕ್ಷಣದಲ್ಲಿ ಕೇವಲ ಔಪಚಾರಿಕವಾಗಿ ವಿಷಯಗಳನ್ನು ಮಂಡಿಸದೆ, ವಿವರಿಸಿ "ಪರಿಸರದ ಉಳಿವೇ ಮಾನವನ ಉಳಿವು" ಎಂಬ ವಿಚಾರವನ್ನು ಮಕ್ಕಳಲ್ಲಿ ಪರಿಸರ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುವತ್ತ ನಮ್ಮ ಶಿಕ್ಷಣ ಇಲಾಖೆ ಮೊದಲು ಹೆಜ್ಜೆ ಇಡಬೇಕು. "ಹಸಿರೇ ಉಸಿರು' "ಉಸಿರು ಉಳಿಸಿ" ನಾಡು ಬೆಳಸಿ" ಎಂಬ



ಭಾವನೆಯನ್ನು ಮಕ್ಕಳಲ್ಲಿ ಶಿಕ್ಷಣದ ಮೂಲಕ ಬೆಳಸಿ, ಗಿಡಮರ ನೆಡುವುದರತ್ತ ನೆಲ–ಜಲ ಉಳಿಸುವುದರತ್ತ ಗಮನಹರಿಸುವಂತೆ ಮಾಡಬೇಕು. ಪರಿಸರದ ಜ್ಞಾನ ಮತ್ತು ಅಧ್ಯಯನವನ್ನು ಕೇವಲ ಪಠ್ಯಪುಸ್ತಕಗಳಿಂದ ವಿವರಿಸುವುದಷ್ಟೇ ತಮ್ಮ ಕರ್ತವ್ಯವೆಂದು ತಿಳಿಯದೆ ಅದಕ್ಕೆ ಹೊರತಾದ ಚಟುವಟಿಕೆಗಳ ಮೂಲಕ ಜ್ಞಾನ ಅಭಿವೃದ್ಧಿ ಮಾಡಬೇಕು.

ಸ್ವಚ್ಛತೆ, ಪರಿಸರದ ಶುಚಿತ್ವದ ಬಗ್ಗೆ ತಿಳಿ ಹೇಳಿ ಪರಿಸರ ಮಾಲಿನ್ಯವನ್ನು ತಡೆಗಟ್ಟುವುದು ಹೇಗೆ ಮತ್ತು ಪರಿಸರ ಸಂಪತ್ತನ್ನು ಸಮರ್ಪಕವಾಗಿ ಬಳಸಿಕೊಳ್ಳುವುದರ ಬಗ್ಗೆ ವಿವಿಧ ವಾಸ್ತವಿಕ ಕಾರ್ಯಕ್ರಮಗಳ ಮುಖೇನ ನೈಜತೆಯ ನಿಜ ರೂಪ ತೋರಿಸಬೇಕು.

ಅಂತಿಮವಾಗಿ ಭೂ ಸಂರಕ್ಷಣೆ, ಜಲಸಂರಕ್ಷಣೆ, ಒಟ್ಟಾರೆ ಪರಿಸರ ಸಂರಕ್ಷಣೆ ಮುಂತಾದವುಗಳನ್ನು ಸುಸಂಬದ್ಧ ಶಿಕ್ಷಣ ಪದ್ಧತಿಯಿಂದ ಮಾತ್ರ ಜಾಗೃತಿ ಮೂಡಿಸಲು ಸಾಧ್ಯ ಎಂಬುದು ಸತ್ಯಕ್ಕೆ ಬಹು ಹತ್ತಿರವಾಗಿದೆ. ಮನುಷ್ಯ ಮಾಡುತ್ತಿರುವ ಈ ಪ್ರಕೃತಿ ದೌರ್ಜನ್ಯಗಳನ್ನು ತಡೆಯಲು ಪರಿಸರದ ಶಿಕ್ಷಣ ಅತ್ಯಗತ್ಯವಾಗಿದೆ.

ಶಿಕ್ಷಣವನ್ನು ಇಂದಿನ ಹಾಗೂ ಭ'ವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡಿ ಮಕ್ಕಳಿಂದಲೇ ಪರಿಸರ ಉಳಿಸಿ, ಅದರ ಅಭಿವೃದ್ಧಿ ಮಾಡುವಂತಹ ಶಿಕ್ಷಣವನ್ನು ಶಿಕ್ಷಕರಾದ ನಾವು ತುಂಬುಜವಾಬ್ದಾರಿಯಿಂದ ಹಾಗೂ ನಮ್ಮ ಆದ್ಯ ಕರ್ತವ್ಯವೆಂದು ತಿಳಿದು ಪರಿಸರ ಸಂರಕ್ಷಣೆಯ ನಿಟ್ಟಿನತ್ತ ಕಾರ್ಯ ಪ್ರವೃತ್ತರಾಗಬೇಕು.

●

ಮನವಿದು ವಿಷಯಕ್ಕೆ ಹರಿವುದು ನಿಮ್ಮನನುದಿನ ನೆನಯಲೀಯದು – ಬಸವಣ್ಣ

## ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ)

# ಯುಗಾದಿ ಹೊಸ ವರ್ಷದ ದಿನದರ್ಶಿಕೆ ಬಿಡುಗಡೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಯ ಸಹಯೋಗದೊಂದಿಗೆ ದಿನಾಂಕ 10-4-2021, ಶನಿವಾರದಂದು ಸಂಘದ ಕೇಂದ್ರ ಕಛೇರಿ ಯಾದವಸ್ಮೃತಿಯಲ್ಲಿ ಯುಗಾದಿ ಹೊಸ ವರ್ಷದ ದಿನದರ್ಶಿಕೆ ಬಿಡುಗಡೆ ಸಮಾರಂಭ ನೆರವೇರಿತು.

ಶ್ರೀಮತಿ ಸುಭದ್ರ, ಪವನ್ ಇಂಗ್ಲೀಷ್ ಸ್ಕೂಲ್‌ರವರು ವಿದ್ಯಾಧಿದೇವತೆಯಾದ ಸರಸ್ವತಿಯ ಪ್ರಾರ್ಥನೆಯನ್ನು ಮಾಡುವ ಮೂಲಕ ಕಾರ್ಯಕ್ರಮ ಆರಂಭವಾಯಿತು. ಡಾ॥ ವೆಂಕಟರಮಣ ದೇವರು ಭಟ್, ಬೆಂಗಳೂರು ದಕ್ಷಿಣ ಜಿಲ್ಲಾಕಾರ್ಯದರ್ಶಿರವರು ಯುಗಾದಿಯ ಆಚರಣೆ ಭಾರತೀಯ ಪರಂಪರೆಯಲ್ಲಿ ಎಷ್ಟು ಮಹತ್ವಪೂರ್ಣವಾಗಿದೆ ಎಂಬುದನ್ನು ತಿಳಿಸಿ, ಗಣ್ಯರನ್ನು ಪರಿಚಯಿಸಿ ಸ್ವಾಗತ ಕೋರಿದರು.

ಶ್ರೀ ಜೆ.ಎಂ ಜೋಶಿಯವರು ಕರ್ನಾಟಕ ರಾಜ್ಯಮಾಧ್ಯಮಿಕ ಶಿಕ್ಷಕ ಸಂಘ ರಾಜ್ಯದ ಕೋಶಾಧ್ಯಕರು ಪ್ರಾಸ್ತಾವಿಕವಾಗಿ ಮಾತನಾಡಿ ಸಂಘದ ಪ್ರಮುಖವಾದ ಕಾರ್ಯಕ್ರಮಗಳನ್ನು ವಿವರಿಸಿ ದಿನದರ್ಶಿಕೆ ಬಿಡುಗಡೆಯ ಹಿನ್ನೆಲೆಯನ್ನು ತಿಳಿಸಿದರು.

ಮುಖ್ಯ ಅಭ್ಯಾಗತರಾಗಿ ಆಗಮಿಸಿದ ಶ್ರೀ. ಅ. ದೇವೇಗೌಡರು ವಿಧಾನ ಪರಿಷತ್ ಸದಸ್ಯರು, ಬೆಂಗಳೂರು ಪದವೀಧರ ಕ್ಷೇತ್ರ ಇವರು ದಿನದರ್ಶಿಕೆಯನ್ನು ಬಿಡುಗಡೆ ಮಾಡಿ ಸಂಘದ ಕಾರ್ಯಕ್ರಮಗಳನ್ನು ಮೆಚ್ಚಿ ಸಂಘದ ಸಾಧನೆ ಬೇರೆ ಸಂಘಗಳಿಗಿಂತ ವಿಶಿಷ್ಟವಾಗಿದೆ ಎಂದು ಅಭಿಪ್ರಾಯಪಟ್ಟರು. 52 ವರ್ಷಗಳ ಇತಿಹಾಸವನ್ನು ಹೊಂದಿದ ಸಂಘವನ್ನು ನೋಂದಣಿ ಮಾಡಲು ಸಹಕರಿಸುವುದಲ್ಲದೇ ಶಿಕ್ಷಕರ ಯಾವುದೇ ಸಮಸ್ಯೆಗಳಿದ್ದರೂ ಸರ್ಕಾರದ ಜೊತೆ ಮಾತನಾಡಿ ಸಹಕರಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಜಿ.ಎಸ್ ಕೃಷ್ಣಮೂರ್ತಿರವರು ಮಾತನಾಡುತ್ತಾ, ನಮ್ಮ ಭಾರತೀಯ ಪರಂಪರೆಯಲ್ಲಿ ಹುಣ್ಣಿಮೆಗಳ ಆಚರಣೆಗಳು ಹಾಗೂ ದೇವಸ್ಥಾನಗಳ ನಿರ್ಮಾಣ ಅತ್ಯಂತ ವೈಜ್ಞಾನಿಕವೆಂಬುದನ್ನು ಫೇಸ್‌ಬುಕ್‌ನಲ್ಲಿ ಅಮೇರಿಕನ್ನರು ವಿಮರ್ಶೆ ಮಾಡಿರುವುದನ್ನು ಹಂಚಿಕೊಂಡರು. ಯುಗಾದಿಯನ್ನು ಸೂರ್ಯಸಿದ್ಧಾಂತ ಮತ್ತು ಚಾಂದ್ರಮಾನ ಸಿದ್ಧಾಂತವನ್ನು ಆಧರಿಸಿ ಹೇಗೆ ಆಚರಿಸುತ್ತಾರೆ ಎಂಬುದನ್ನು ತಿಳಿಸಿಕೊಟ್ಟರು.

ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಗಂಗಪ್ಪರವರು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಗಣ್ಯರನ್ನು ಸ್ಮರಿಸಿಕೊಂಡು ವಂದನಾರ್ಪಣೆ ಮಾಡಿದರು.

ವಿದ್ವಾನ್ ನಾರಾಯಣ ಭಟ್ಟರು ಉತ್ತರವಲಯದ ಕಾರ್ಯದರ್ಶಿಗಳು ಯುಗಾದಿ ದಿನದರ್ಶಿಕೆಯ ಬಿಡುಗಡೆ ಕಾರ್ಯಕ್ರಮದ ಉದ್ದೇಶವನ್ನು ವಿವರಿಸಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ●

## ಯೋಗ್ಯತೆಗೇ ಬೆಲೆ, ಸ್ಥಾನಮಾನಕ್ಕಲ್ಲ

ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಮಗ ಅನಿಲ್ ಶಾಸ್ತ್ರಿ ಪದವಿ ಶಿಕ್ಷಣಕ್ಕಾಗಿ ದೆಹಲಿ ಸೈಂಟ್ ಸ್ಟೀಫನ್ ಕಾಲೇಜಿಗೆ ಸೇರಲು ಅರ್ಜಿ ಸಲ್ಲಿಸಿದರು. ಅರ್ಜಿಯಲ್ಲಿ ತಂದೆಯ ಹೆಸರು – L. B. ಶಾಸ್ತ್ರಿ, ಮನೆಯ ವಿಳಾಸ– ' 10 ಜನಪಥ' ಎಂಬುದಾಗಿ ಬರೆದಿದ್ದರು. ಸಂದರ್ಶನದ ದಿನ ಎಲ್ಲಾ ಅರ್ಜಿಗಳನ್ನು ಸಂದರ್ಶನ ಸಮಿತಿಯವರು ಪರಿಶೀಲಿಸುತ್ತಿದ್ದರು. ವಿದ್ಯಾರ್ಥಿಗಳು ತಮ್ಮ ಸರದಿಗಾಗಿ ಕಾಯುತ್ತಿದ್ದರು. ಸ್ವಲ್ಪ ಹೊತ್ತಿನಲ್ಲಿ ಸಂದರ್ಶನ ಸಮಿತಿಯ ಅಧ್ಯಕ್ಷರಾದ ರಾಬರ್ಟ್ ಹೊರಗೆ ಬಂದು ಅನಿಲ್ ಶಾಸ್ತ್ರಿಯವರನ್ನು ಕರೆದರು. "ನಿಮ್ಮ ವಿಳಾಸದಲ್ಲಿ ' 10 ಜನಪಥ' ಎಂದು ಬರೆದಿದ್ದೀರಿ. ಇದು ಪ್ರಧಾನಮಂತ್ರಿಗಳ ಮನೆ. ಅಲ್ಲಿ ನೀವು ಹೇಗೆ ವಾಸವಾಗಿದ್ದೀರಿ?"

ಅನಿಲ್ ಶಾಸ್ತ್ರಿಯವರು ವಿನಮ್ರಪೂರ್ವಕವಾಗಿ ಉತ್ತರಿಸಿದರು– 'ಸರ್, ನಾನು ಪ್ರಧಾನ ಮಂತ್ರಿಯವರ ಮಗ'.

ತಕ್ಷಣವೇ ರಾಬರ್ಟ್ ಅನಿಲ್‌ರನ್ನು ತಮ್ಮ ಕೊಠಡಿಗೆ ಕರೆದುಕೊಂಡು ಹೋದರು. ಅಲ್ಲಿ ಅನಿಲ್‌ರನ್ನು ತುಂಬಾ ಗೌರವಪೂರ್ವಕವಾಗಿ ನಡೆಸಿಕೊಂಡರು. ಸಂದರ್ಶನ ಮುಗಿಸಿದ ಅನಿಲ್ ತಮಗೆ ಸಿಕ್ಕ ಗೌರವವನ್ನೇ ಮೆಲುಕು ಹಾಕುತ್ತಾ ಸಂತಸದಿಂದ ಮನೆಗೆ ಬಂದರು.

ಸಂಜೆ ಲಾಲ್‌ಬಹದ್ದೂರರು ತಮ್ಮ ಕಛೇರಿಯಿಂದ ಮನೆಗೆ ಬಂದರು. ಅವರು ಬರುವುದನ್ನೇ ಕಾಯುತ್ತಿದ್ದ ಅನಿಲ್ ಅಂದು ಕಾಲೇಜಿನಲ್ಲಿ ನಡೆದ ಸಂಗತಿಗಳನ್ನು ತಂದೆಗೆ ಹೇಳಿದರು. 'ಅಪ್ಪಾಜೀ, ಈ ದಿನ ಕಾಲೇಜಿನಲ್ಲಿ ಎರಡು ಸಂಗತಿಗಳು ನಡೆದವು. ಮೊದಲು ನಾನು ನಿಮ್ಮ ಮಗ ಎಂದು ಯಾರಿಗೂ ತಿಳಿದಿರಲಿಲ್ಲ. ಎಲ್ಲರಂತೆ ನಾನೂ ನನ್ನ ಸರದಿಗಾಗಿ ಕಾಯುತ್ತಾ ಕುಳಿತಿದ್ದೆ. ನಾನು ಪ್ರಧಾನಮಂತ್ರಿಗಳ ಮಗ ಎಂದು ಯಾವಾಗ ತಿಳಿಯಿತೋ ಆ ಕ್ಷಣವೇ ನನ್ನನ್ನು ಅತ್ಯಂತ ಗೌರವದಿಂದ ನೋಡಿಕೊಂಡರು.'

ಇದನ್ನು ಕೇಳಿದ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಹೇಳಿದರು. 'ನೀನು ಉಳಿದೆಲ್ಲ ವಿದ್ಯಾರ್ಥಿಗಳಂತೆ ಅರ್ಜಿಯನ್ನು ಹಾಕಿ ಸಂದರ್ಶನಕ್ಕೆ ಕಾಯುತ್ತಿದ್ದುದು ಸರಿಯಾಗಿಯೇ ಇದೆ. ಆದರೆ ನಂತರ ನಡೆದ ಸಂಗತಿ ನನಗೆ ಸರಿ ಅನಿಸುತ್ತಿಲ್ಲ.'

'ನೀನು ಪ್ರಧಾನಮಂತ್ರಿಯವರ ಮಗ ಎಂದು ಗೊತ್ತಾಗಿದ್ದರಿಂದಲೇ ನಿನ್ನನ್ನು ಗೌರವದಿಂದ ನೋಡಿಕೊಂಡರು. ವಾಸ್ತವದಲ್ಲಿ ವ್ಯಕ್ತಿಗೆ ಅವನ ಯೋಗ್ಯತೆಯಿಂದಲೇ ಗೌರವ ಸಿಗಬೇಕೇ ವಿನಃ ಅವರ ಸ್ಥಾನಮಾನ ಅಥವಾ ಪ್ರಭಾವದಿಂದಲ್ಲ.' ●

➢ ಪುಟ 6 ರಿಂದ.....

ಕಳೆದುಕೊಂಡ ತಬ್ಬಲಿ, ಕಡುಬಡತನದಲ್ಲಿಯೇ ಸೋದರತ್ತೆಯ ಆಶ್ರಯದಲ್ಲಿ ಕಳೆದ ಬಾಲ್ಯ. ಅವರಿವರನ್ನು ಬೇಡಿ ಶಾಲಾಶುಲ್ಕ ಕಟ್ಟಿ ಎಸ್ ಎಸ್ ಎಲ್ ಸಿ ಶಿಕ್ಷಣ ಪಡೆದುಕೊಂಡ ಹುಡುಗ. ಯಾವುದೋ ಕಛೇರಿಯಲ್ಲಿ ಅಟೆಂಡರ್ ಹುದ್ದೆಗೆ ಸೇರಿ, ನಂತರ ಪೋಲಿಸ್ ಇಲಾಖೆಗೆ ಅಂಟಿಕೊಂಡಿದ್ದಾಗಿತ್ತು.

ಎತ್ತಣ ಮಾಮರ? ಎತ್ತಣ ಕೋಗಿಲೆ? ದಯೆ ದಾಕ್ಷಿಣ್ಯಗಳನ್ನು ಹತ್ತಿರಕ್ಕೂ ಸೇರಿಸದೆ, ಸಮಾಜದ ದುಷ್ಟ ಶಕ್ತಿಗಳನ್ನು ಹಿಡಿಯುವ ಕಠೋರತನವೆಲ್ಲಿ? 'ನಗು' ಎಂಬ ಜೀವನಾಮೃತವನ್ನು ಸಮಾಜಕ್ಕೆ ನೀಡುವ ಸಾಹಿತಿಯೆಲ್ಲಿ? ನೋವನ್ನೆಲ್ಲ ನುಂಗಿ ನಗೆಯನ್ನು ಮಾತ್ರ ಸುತ್ತಲಿನವರಿಗೆ ಹಂಚಿದ ಒಂದು ಪ್ರೇರಣಶಕ್ತಿ ನಮ್ಮ 'ಬೀಚಿ' ಯವರು. ಅಷ್ಟೇ ಅಲ್ಲ, ಆತ ಒಬ್ಬ ಮಾನವತಾವಾದಿ ಕೂಡ. ಕೈಗೆ ಬಂದ ಮಗನನ್ನು ಅವನ ನಿಶ್ಚಿತಾರ್ಥದ ನಂತರ ಕಳೆದುಕೊಂಡಾಗ, ಯಾವ ಕಂದಾಚಾರಕ್ಕೂ ಜೋತು ಬೀಳದೆ ಅದೇ ಹುಡುಗಿಯನ್ನು ಮತ್ತೊಬ್ಬ ಮಗನಿಗೆ ವಿವಾಹ ಮಾಡಿಸಿ ಹೃದಯ ಶ್ರೀಮಂತಿಕೆ ಮೆರೆದವರು. ಯಾರನ್ನೂ ಅಲ್ಪರನ್ನಾಗಿ ಮಾಡುವುದು ಬೇಡವೆನ್ನುತ್ತಿದ್ದ ಅವರು ಕಂದಾಚಾರ, ಮೂಢನಂಬಿಕೆಗಳ ವಿರೋಧಿಯಾಗಿದ್ದವರು. ಶಿಕ್ಷಣದ ಅಗತ್ಯವನ್ನು ಅವರು ಹೇಳುತ್ತಿದ್ದುದು ಹೀಗೆ: "ಇಂದು ಒಂದು ಶಾಲೆಯನ್ನು ಸ್ಥಾಪಿಸು, ಮುಂದೆ ಎಂದಾದರೂ ಎರಡು ಜೈಲುಗಳು ತಾವಾಗಿಯೇ ಮುಚ್ಚುತ್ತವೆ".

ಬದುಕನ್ನು ರೂಪಿಸಿಕೊಳ್ಳಲು ಅವರು ನೀಡುತ್ತಿದ್ದ ಮಾರ್ಗದರ್ಶಿ ಸೂತ್ರ:

**ನಿನ್ನಂತೆ ನೀನಾಗು ನಿನ್ನ ನೀ ಅರಿ ಮೊದಲು**
**ಚೆನ್ನೆಂದು ದೊಡ್ಡವರ ನೀ ಅನುಕರಿಸಬೇಡ**
**ಏನಾಯ್ತು ಕತ್ತೆ ಚೆಲುವಿತ್ತು ಮುದ್ದಿತ್ತು**
**ತನ್ನಪ್ಪನಂತೆಯೇ ಆಗಿ ಹಾಳಾಯ್ತು.**

ನೋಡಿ, ಇಲ್ಲಿಯೂ ಹಾಸ್ಯವಿದೆ.

ಮತ್ತೊಂದು ಸೂತ್ರ "ಗೋಪುರದಲ್ಲಿರುವ ಗಡಿಯಾರದ ಹಾಗೆ ನಿನ್ನ ಬಾಳು, ಮತ್ತೊಬ್ಬರು ತಲೆಯೆತ್ತಿ ನೋಡುವಂತೆ ಬಾಳು"

**ನಾವೂ ಹೀಗಾಗಬಹುದೇ?**

**ಮೊದಲು ಅಪ್ಪಣೆ ಪಾಲಿಸುವುದನ್ನು ಕಲಿಯಿರಿ. ಆಜ್ಞೆ ಕೊಡುವ ಅಧಿಕಾರ ಆಗ ತನ್ನಿಂದ ತಾನೇ ಬರುವುದು.**

**ಬಹಳಷ್ಟು ಕಠಿಣ ಸಾಧನೆ ಮಾಡಿದ ಮೇಲೆ ನನಗೆ ತಿಳಿದ ಸತ್ಯ ಇದು – ದೇವರು ಎಲ್ಲಾ ಜೀವಿಗಳಲ್ಲೂ ಇದ್ದಾನೆ. ಯಾರು ಜೀವರಿಗೆ ಸೇವೆ ಸಲ್ಲಿಸುತ್ತಾನೋ ಅವನು ದೇವರಿಗೆ ಸೇವೆ ಸಲ್ಲಿಸಿದಂತೆ.**

**– ಸ್ವಾಮಿ ವಿವೇಕಾನಂದ**

# ಸರಳತೆ ಮತ್ತು ಮಾನವೀಯತೆಗೆ ಉದಾಹರಣೆಯಾದ ಶಿಕ್ಷಣ ಸಚಿವರು

ನಿಮ್ಮ ಮಾತುಗಳು ನನಗೆ ಮಾನಸಿಕ ಸ್ಥೈರ್ಯವನ್ನು ತುಂಬಿದವು ಎಂದು ಶಿಕ್ಷಕರಾದ ಎಸ್.ಜೆ.ತಾಂಬೆಯವರು ಹೇಳುವಾಗ ಅವರ ಕಣ್ಣುಗಳು ಧನ್ಯತೆಯಿಂದ ಕೂಡಿದ್ದವು. ಕಳೆದ ಏಳು ತಿಂಗಳುಗಳಿಂದ ಪ್ಯಾರಲಿಸಿಸ್‌ಗೆ ಒಳಗಾಗಿ ತೊಂದರೆ ಅನುಭವಿಸುತ್ತಿದ್ದ ಶಿಕ್ಷಕನೊಬ್ಬ ಸಚಿವರ ಮನೆ ಹೋದಾಗ ಮೇಲಿನ ಮಹಡಿಯಲ್ಲಿ ಅಹವಾಲು ಆಲಿಸುತ್ತಿದ್ದ ಸಚಿವರು ಶಿಕ್ಷಕನೊಬ್ಬ ತೊಂದರೆಗೆ ಒಳಗಾಗಿ ಮನೆಗೆ ಬಂದ ವಿಷಯ ತಿಳಿದು ಶಿಕ್ಷಕನಿರುವಲ್ಲಿಗೆ ಬಂದು ಪಕ್ಕದಲ್ಲಿ ಕುಳಿತು ಎಸ್.ಜೆ ತಾಂಬೆ ಶಿಕ್ಷಕರ ಯೋಗಕ್ಷೇಮ ವಿಚಾರಿಸಿ, ಅವರೊಂದಿಗೆ ಹಿರಿಯ ಅಣ್ಣನಾಗಿ ಮಾತನಾಡಿದ್ದು, ಅವರ ಎಲ್ಲಾ ಪರಿಸ್ಥಿತಿಯನ್ನು ತಿಳಿದು ಮರುಗಿದ್ದು, ಸಚಿವರ ಸರಳತೆಗೆ ಮತ್ತು ಮಾನವೀಯತೆಗೆ ಹಿಡಿದ ಕನ್ನಡಿಯಾಗಿದೆ. ನೊಂದ ಶಿಕ್ಷಕರಿಗೆ ಆತ್ಮಸ್ಥೈರ್ಯ ತುಂಬಿದ ರೀತಿ ಅನುಕರಣೀಯವಾದದ್ದು.

ಸಹಾಯ ಕೇಳಿಬಂದ ಶಿಕ್ಷಕರಿಗೆ ಆ ಸ್ಥಳದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಕರೆದು ತಕ್ಷಣ ಸಮಸ್ಯೆಗೆ ಸ್ಪಂದಿಸಿದ್ದಕ್ಕಾಗಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘವು ಶಿಕ್ಷಣ ಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತದೆ.

# ಶಿಕ್ಷಕರಿಗಾಗಿ ರಾಷ್ಟ್ರಮಟ್ಟದ ಸಂಶೋಧನಾ ಪ್ರಬಂಧ ಸ್ಪರ್ಧೆ

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಸಮರ್ಥ ಭಾರತ ಆಯಾಮದೊಂದಿಗೆ ಅಖಿಲ ಭಾರತೀಯ ಸಂಶೋಧನಾ ಲೇಖನ ಸ್ಪರ್ಧೆ – 2021 ಯನ್ನು ಆಯೋಜಿಸಿದೆ.

ಹೆಚ್ಚಿನ ಮಾಹಿತಿಗಾಗಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಮಹಿಳಾ ವಿಭಾಗದ ಸಹ ಕಾರ್ಯದರ್ಶಿಯವರಾದ ಶ್ರೀಮತಿ ಮಮತಾ ಡಿ.ಕೆ (9886598436), ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ರೋಹಿಣಿ ನಾಯಕ್ (9448162212), ರಾಜ್ಯ ಕಾರ್ಯದರ್ಶಿಗಳಾದ ಶ್ರೀಯುತ ವೃಷಭೇಂದ್ರ ಸ್ವಾಮಿ (9448862810), ರಾಜ್ಯ ಕಾರ್ಯದರ್ಶಿಗಳಾದ ಶ್ರೀಮತಿ ವಿಜಯಲಕ್ಷ್ಮಿ ಬಿ. (9448310331) ಸಂಪರ್ಕಿಸಬಹುದು.

ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರು ಭಾಗವಹಿಸಬೇಕೆಂದು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಶಿವಾನಂದ ಸಿಂಧನಕೇರಾ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀಯುತ ಸಂದೀಪ್ ಬೂದಿಹಾಳ್ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಚಿದಾನಂದ್ ಪಾಟೀಲ್ ತಿಳಿಸಿರುತ್ತಾರೆ.

## ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ



**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ನಮ್ಮ ಭಾರತದಲ್ಲಿನ ನದಿಗಳು ನಮಗೆ ಮಾತೃಸ್ವರೂಪಿಗಳು. ನೀರು ಈ ದೇಶದಲ್ಲಿ ಕೇವಲ $H_2O$ ಅಲ್ಲ. ವೇದವ್ಯಾಸರು, ವಿಶ್ವಸ್ಯ ಮಾತರಃ ಎನ್ನುತ್ತಾ ನದಿಗಳನ್ನು ಜಗತ್ತಿನ ಮಾತೃತ್ವದ ಸ್ಥಾನದಲ್ಲಿರಿಸಿ ನಮಿಸಿದರು. ನದಿಗಳ ಹೆಸರನ್ನು ನಮ್ಮ ಸಹೋದರಿಯರಿಗೆ ಇಟ್ಟು ಗೌರವಿಸಿದ ದೇಶ ನಮ್ಮದು. ಮಾತೃಸ್ವರೂಪಿಗಳಾದ ಗೋವುಗಳನ್ನು ಗಂಗೆ, ಯಮುನೆ, ನಂದಿನಿ, ಕಪಿಲೆ ಮುಂತಾದ ನದಿಗಳ ಹೆಸರಿನಿಂದ ಕರೆದವರು ನಾವು. ಎಲ್ಲ ಮಂಗಲ ಸಮಾರಂಭಗಳಲ್ಲಿ ಮೊದಲು ಕಲಶಪೂಜೆ ಮಾಡುತ್ತೇವೆ. ಆಗ ಆ ಕಲಶದಲ್ಲಿ ಎಲ್ಲ ಪವಿತ್ರ ನದಿಗಳು ಅವ್ಯಕ್ತವಾಗಿ ಪ್ರವೇಶಿಸಲೆಂದು ಆಶಿಸುತ್ತಾ......

**ಗಂಗೇಚ ಯಮುನೇ ಚೈವ ಗೋದಾವರಿ ಸರಸ್ವತೀ।**
**ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು॥**

ಎಂಬುದಾಗಿ ಪ್ರಾರ್ಥನೆ ಮಾಡುತ್ತೇವೆ. ಸ್ನಾನ ಮಾಡುವಾಗಲೂ ಈ ಶ್ಲೋಕವನ್ನು ಹೇಳುತ್ತೇವೆ. ನಾವು ಸ್ನಾನ ಮಾಡುವ ನೀರಿನಲ್ಲಿ ಈ ತೀರ್ಥಗಳು ಸೇರಿ ನಮ್ಮನ್ನು ಹರಸಲೆಂದು ಪ್ರಾರ್ಥಿಸುತ್ತೇವೆ.

ನೀರು ಶರೀರದ ಕೊಳೆ ತೊಳೆದರೆ, ಈ ನದಿಗಳ ನಾಮಸ್ಮರಣೆ ಮನಸ್ಸಿನ ಕೊಳೆ ತೊಳೆಯುತ್ತದೆ. ಸ್ನಾನದಂತಹ ಸಾಮಾನ್ಯ ಕೆಲಸದಲ್ಲೂ ಉತ್ತರದ ಗಂಗೆ, ಪೂರ್ವದ ಬ್ರಹ್ಮಪುತ್ರಗಳನ್ನು ಸ್ಮರಿಸಿ, ಇಡೀ ದೇಶವನ್ನು ಕಣ್ಮುಂದಿರಿಸುತ್ತಾ ಮನಸ್ಸಿಗೆ ಸಂಸ್ಕಾರ ನೀಡುವ ಈ ವಿಧಾನ ಎಷ್ಟೊಂದು ಮಹತ್ವಪೂರ್ಣವಾದುದಲ್ಲವೇ? ಮಾನವ ಮಾಧವನಾಗಲು, ವಿಕಾಸದ ಮಾರ್ಗದಲ್ಲಿ ಸಾಗಲು ಇವೆಲ್ಲ ಸೋಪಾನಗಳಂತಿವೆ.

ನಮ್ಮ ದೇಶದ ಈ ಪರಂಪರೆಯನ್ನು ನಾವು ಮುಂದುವರೆಸಿ, ಮುಂದಿನ ಪೀಳಿಗೆಗೂ ತಿಳಿಸಿದರೆ ಭಾರತೀಯರಾಗಿದ್ದಕ್ಕೂ ಸಾರ್ಥಕವಾದೀತು.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಕಾರಣೀಭೂತರಾದ ಆಧ್ಯಾತ್ಮಿಕ ನಾಯಕರು ಯಾರು?
2. ಸ್ವತಂತ್ರ ಭಾರತದ ಮೊದಲ ಮಹಿಳಾ ಮುಖ್ಯಮಂತ್ರಿಯ ಹೆಸರೇನು?
3. ಗುರುನಾನಕ್ ರವರು ಸ್ಥಾಪಿಸಿದ ಮತ ಯಾವುದು?
4. ಶ್ರವಣಬೆಳಗೊಳದಲ್ಲಿ ಗೊಮ್ಮಟೇಶ್ವರನ ಪ್ರತಿಮೆಯನ್ನು ಯಾರ ಆಳ್ವಿಕೆಯಲ್ಲಿ ಸ್ಥಾಪಿಸಲಾಯಿತು?
5. ಭಾರತದ ಸಂವಿಧಾನ ಜಾರಿಗೆ ಬಂದ ದಿನ ಯಾವುದು?

## ಜ್ಞಾನ ವಿಜ್ಞಾನ

1. ವಿಶ್ವದಲ್ಲಿ ಅತಿ ಹೆಚ್ಚು ಹಾಲು ಉತ್ಪಾದಿಸುವ ದೇಶವನ್ನು ತಿಳಿಸಿ
2. ಭಾರತದ ಕ್ಷೀರ ಕ್ರಾಂತಿಯ ಜನಕ ಯಾರು?
3. ಗಾಯಿಟರ್ ಕಾಯಿಲೆಯು ಯಾವುದರ ಕೊರತೆಯಿಂದ ಉಂಟಾಗುವುದು?
4. 'ಪೈ'ನ ಬೆಲೆ ಎಷ್ಟು?
5. ಹೃದಯಕ್ಕೆ ಇವು ರಕ್ತವನ್ನು ಸಾಗಿಸುವುವು?

## ಮಾರ್ಚ್ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಬಂಕಿಮಚಂದ್ರ ಚಟರ್ಜಿ
2. ಚನ್ನಬಸವಣ್ಣ
3. ಅದ್ವೈತ
4. ಹಿಂದೂಸ್ಥಾನ
5. ಮಾರ್ಕ್‌ಕಬ್ಬನ್

**ಜ್ಞಾನ–ವಿಜ್ಞಾನ – ಉತ್ತರಗಳು**

1. ಪಂಜಾಬ್
2. ಶ್ರೀವಜುಭಾಯ್ ವಾಲಾ
3. ಸರ್ ಐಸಾಕ್ ನ್ಯೂಟನ್
4. ಸಿಸ್ಮೋಗ್ರಾಫ್
5. ಆಯುರ್ವೇದ

## ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ ಮತ್ತು
## ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ
## ಸಮರ್ಥ ಭಾರತ ಆಯಾಮದೊಂದಿಗೆ ಆಯೋಜಿಸಲಾಗಿರುವ

# ಅಖಿಲ ಭಾರತೀಯ ಸಂಶೋಧನಾ ಲೇಖನ ಸ್ಪರ್ಧೆ – 2021

ಪ್ರಸ್ತಾವನೆ: ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಸಮಾಜದ ಪ್ರಸ್ತುತ ವಿಷಯಗಳ ಬಗ್ಗೆ ವಿಚಾರ ಮಾಡಲು ಸಂಶೋಧನಾ ಲೇಖನದ ಸ್ಪರ್ಧೆಯನ್ನು ಆಯೋಜಿಸುತ್ತಿದೆ.

ಸ್ಪರ್ಧೆಗೆ ಅರ್ಹವಿರುವ ಎರಡು ಶ್ರೇಣಿಗಳು : 1. ಶಾಲಾ ಶಿಕ್ಷಕರು ; 2. ಕಾಲೇಜು ಮತ್ತು ವಿಶ್ವವಿದ್ಯಾಲಯ ಸ್ತರದ ಉಪನ್ಯಾಸಕರು

### ವಿಷಯಗಳು

**ಶಾಲಾ ಶಿಕ್ಷಕರಿಗೆ**

- ಶಿಕ್ಷಣದ ಮೂಲಕ "ಒಂದು ಭಾರತ ಶ್ರೇಷ್ಠ ಭಾರತ" ದ ಭಾವನೆಯನ್ನು ಹೆಚ್ಚಿಸುವುದು.
- ಆನ್ ಲೈನ್ ಶಿಕ್ಷಣದ ಪ್ರಭಾವ/ಪರಿಣಾಮ
- ಮಕ್ಕಳ ಸಮಗ್ರ ವಿಕಾಸ: ಮಾತೃಭಾಷೆಯ ಪಾತ್ರ
- ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನ– ಅವಕಾಶಗಳು ಮತ್ತು ಸವಾಲುಗಳು

**ಕಾಲೇಜು ಮತ್ತು ವಿಶ್ವವಿದ್ಯಾಲಯ ಸ್ತರದ ಉಪನ್ಯಾಸಕರಿಗೆ**

- ಆತ್ಮನಿರ್ಭರ ಭಾರತ : ಅವಕಾಶಗಳು ಮತ್ತು ಸವಾಲುಗಳು
- ಪ್ರಜಾಪ್ರಭುತ್ವದಲ್ಲಿ ಸಾಮಾಜಿಕ ಮಾಧ್ಯಮಗಳ ಪಾತ್ರ
- ಶಿಕ್ಷಣದ ಮುಖಾಂತರ ಸುಸ್ಥಿರ ಅಭಿವೃದ್ಧಿ
- ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನ– ಅವಕಾಶಗಳು ಮತ್ತು ಸವಾಲುಗಳು

ಎರಡು ಶ್ರೇಣಿಗಳಲ್ಲಿ ಭಾಗವಹಿಸುವ ಶಿಕ್ಷಕರು 100 ರೂ.ಗಳನ್ನು ಆನ್ ಲೈನ್ ಮುಖಾಂತರ ಪಾವತಿಸಿ ನೋಂದಣಿ ಮಾಡಿಕೊಳ್ಳಬೇಕು. ಪೂರ್ಣ ವಿವರಕ್ಕಾಗಿ https://abrsm.in ಗೆ ಭೇಟಿ ನೀಡಿ.

ಯಾವುದಾದರೊಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಹಿಂದಿ, ಇಂಗ್ಲೀಷ್ ಅಥವಾ ಕನ್ನಡದಲ್ಲಿ ಸಂಶೋಧನಾ ಲೇಖನವನ್ನು ಬರೆಯಬೇಕು. ಲೇಖನವು 3000 ದಿಂದ 5000 ಶಬ್ದಗಳನ್ನೊಳಗೊಂಡಿರಬೇಕು.

ಸಂಶೋಧನಾ ಲೇಖನದ ಮೊದಲನೇ ಪುಟದ ಬಲಭಾಗದಲ್ಲಿ ಆಯ್ಕೆ ಮಾಡಿಕೊಂಡ ವಿಷಯವನ್ನು ಸ್ಪಷ್ಟವಾಗಿ ಬರೆದಿರಬೇಕು. ಲೇಖನದ ಪಿ.ಡಿ.ಎಫ್ ಸಾಫ್ಟ್ ಕಾಪಿ (pdf soft copy)ಯನ್ನು ದಿನಾಂಕ 31 ಮೇ 2021 ರ ಒಳಗಾಗಿ https://abrsm.in ಗೆ ಅಪ್ಲೋಡ್ ಮಾಡಬೇಕು. ನೋಂದಣಿ ಮಾಡಿಕೊಂಡ ನಂತರವಷ್ಟೇ ಲೇಖನವನ್ನು ಅಪ್ಲೋಡ್ ಮಾಡಲು ಅವಕಾಶ ಕಲ್ಪಿಸಲಾಗುವುದು. ಯಾವುದೇ ಕಾರಣಕ್ಕೂ ಸ್ಪರ್ಧಾದಾರರು ತಮ್ಮ ಹೆಸರು, ಕಾಲೇಜು, ವಿಳಾಸವನ್ನು ಲೇಖನದಲ್ಲಿ ಎಲ್ಲೂ ಬರೆಯದೇ, ನೋಂದಣಿ ಸಂಖ್ಯೆಯನ್ನು ಮಾತ್ರ ನಮೂದಿಸಬೇಕು.

ಸ್ಪರ್ಧೆಯ ಫಲಿತಾಂಶ : 31 ಜುಲೈ 2021 ಕ್ಕೆ ಸ್ಪರ್ಧೆಯ ಫಲಿತಾಂಶವನ್ನು ಪ್ರಕಟಿಸಲಾಗುವುದು.

ಎರಡು ಶ್ರೇಣಿಗಳಿಗೂ ಪ್ರತ್ಯೇಕ ಬಹುಮಾನಗಳನ್ನು ನೀಡಲಾಗುವುದು.

ಮೊದಲನೇ ಬಹುಮಾನ : 21000/– | ಎರಡನೇ ಬಹುಮಾನ : 15000/– | ಮೂರನೇ ಬಹುಮಾನ : 11000/–

ಪ್ರತ್ಯೇಕ ಶ್ರೇಣಿಗಳಲ್ಲಿ 5100/– ರೂ. ಗಳ 7 ಸಮಾಧಾನಕರ ಬಹುಮಾನವಿರುತ್ತವೆ.

ಮೊದಲನೇ, ಎರಡನೇ ಮತ್ತು ಮೂರನೇ ಬಹುಮಾನಗಳನ್ನು ಒಂದಕ್ಕಿಂತ ಹೆಚ್ಚಿನ ವಿಜೇತರು ಪಡೆದಿದ್ದರೆ ಬಹುಮಾನದ ಮೊತ್ತವನ್ನು ಸ್ಪರ್ಧಿಗಳಿಗೆ ಸಮಾನವಾಗಿ ಹಂಚಲಾಗುವುದು.

ರಾಜ್ಯಮಟ್ಟದ ಅರ್ಹತೆ ಪಡೆದ ಪ್ರತಿ ಸ್ಪರ್ಧಿಗಳಿಗೆ ಪ್ರಮಾಣಪತ್ರವನ್ನು ನೀಡಲಾಗುವುದು.

15–20 ಉತ್ತಮ ಲೇಖನಗಳನ್ನು ಪ್ರಕಟಿಸಲಾಗುವುದು.

ಸೂಚನೆ: ಮೌಲ್ಯಮಾಪನ ಮತ್ತು ಆಯ್ಕೆ ಪ್ರಕ್ರಿಯೆಯಲ್ಲಿರುವ ಸದಸ್ಯರು ಸ್ಪರ್ಧೆಯಲ್ಲಿ ಭಾಗವಹಿಸಬಹುದು, ಆದರೆ ಬಹುಮಾನಗಳಿಗೆ ಅರ್ಹರಾಗಿರುವುದಿಲ್ಲ.

MAG(3)/NPP/23/2020-21 Registered No. RNI 45459/85

Posted at Bangalore PSO Bangalore -560 026

Date of Publishing : 17-04-2021 Date of Posting 20th or 21st of every month Posted at Periodical Rate

# ಚಿತ್ರಸುದ್ದಿ




ಬೆಂಗಳೂರು
ಉತ್ತರ ಮತ್ತು
ದಕ್ಷಿಣ
ಜಿಲ್ಲಾ ಶಾಖೆಗಳಿಂದ
ಯುಗಾದಿ
ಹೊಸ ವರ್ಷದ
ದಿನದರ್ಶಿಕೆ
ಬಿಡುಗಡೆ

ನಿಪ್ಪಾಣಿ ತಾಲ್ಲೂಕು
ನೂತನ
ಕಾರ್ಯಕಾರಣಿ
ರಚನೆ







ಉಪನ್ಯಾಸಕರ ವರ್ಗಾವಣೆ ಸಮಸ್ಯೆಗಳ ಬಗ್ಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಮತ್ತು ವಿಧಾನ ಪರಿಷತ್ ಸದಸ್ಯರನ್ನು ಒಳಗೊಂಡಂತೆ, ಮಾನ್ಯ ಎಸ್ ಸುರೇಶಕುಮಾರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರೊಂದಿಗೆ ಚರ್ಚೆ ಮಾಡಲಾಯಿತು



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ಜಿಲ್ಲೆಯ ಗೌರವಾಧ್ಯಕ್ಷರಾದ ಎಸ್. ಜೆ. ತಾಂಬೆಯವರ ಆರೋಗ್ಯದ ಬಗ್ಗೆ ಕಾಳಜಿಯಿಂದ ವಿಚಾರಿಸುತ್ತಿರುವ ಶಿಕ್ಷಣ ಸಚಿವರು

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com